ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 227 RNI Number : KNKAN/25/A2770 28-08-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :227 ರಾಯಚೂರು 28-08-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563

ರಾಜ್ಯದ 101 ತಾಲೂಕುಗಳು ಬರಪೀಡಿತ: ಸರ್ಕಾರ ಘೋಷಣೆ

ರಾಜ್ಯದಲ್ಲಿ ಕುಡಿಯುವ ನೀರಿಗೆ ಭಾರಿ ಸಮಸ್ಯೆ ಆಗಿದೆ. ಕೊಳವೆ ಬಾವಿ ನೀರು ಬರಿದಾಗುತ್ತಿದೆ. 758 ಗ್ರಾಮಗಳಲ್ಲಿ 190 ಗ್ರಾಮಗಳಿಗೆ ಟ್ಯಾಂಕರ್

ಬೆಂಗಳೂರು: ರಾಜ್ಯದ 101 ತಾಲೂಕುಗಳು ಬರಪೀಡಿತ ಎಂದು ಸರ್ಕಾರ ಘೋಷಿಸಿದ್ದು, ಈ ಸಂಬಂಧ ಅಧಿಸೂಚನೆ ಹೊರಡಿಸಿದೆ. ಈ ಸಂಬಂಧ ವಿಧಾನಸೌಧದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಕಂದಾಯ ಸಚಿವರೂ ಆದ ಡಿಸಿಎಂ ಜಿ.ಪರಮೇಶ್ವರ್ ವಿವರಣೆ ನೀಡಿದರು.

ಜೂನ್ 1ರಿಂದ ಆಗಸ್ಟ್ 12ರವರೆಗಿನ ಅವಧಿಯ ಮಳೆ ಕೊರತೆಯ ಅವಲೋಕನ ಮಾಡಲಾಗಿದೆ. ಈ ವೇಳೆ 134 ತಾಲೂಕುಗಳಲ್ಲಿ ತೀವ್ರ ಮಳೆ ಕೊರತೆ ಇದ್ದು, ಅವುಗಳನ್ನು ಬರ ಪೀಡಿತ ಎಂದು ಘೋಷಿಸಬಹುದು ಎಂದು ಅಂದಾಜಿಸಿದ್ದೆವು. ಅದನ್ನು ದೃಢಪಡಿಸಲು ಗ್ರೌಂಡ್ ಟ್ರೂತ್ ಮಾಡಿದ್ದೇವೆ. ಅದರಲ್ಲಿ 101 ತಾಲೂಕುಗಳು ಬರ ಎಂದು ಘೋಷಿಸಲು ಅರ್ಹವಾಗಿವೆ. 101ರ ತಾಲೂಕುಗಳ ಪೈಕಿ 89 ತಾಲೂಕುಗಳಲ್ಲಿ ತೀವ್ರ ಬರವಿದೆ. 12 ತಾಲೂಕುಗಳಲ್ಲಿ ಸಾಧಾರಣ ಬರ ಇದೆ ಎಂದು ಘೋಷಿಸಿದರು.

ಮುಂದಿನ ಹಂತದಲ್ಲಿ ಮತ್ತೆ ಬರ ಸಂಬಂಧ ಪರಿಶೀಲನೆ ಮಾಡುತ್ತೇವೆ. ಪ್ರತಿ 15 ದಿನಕ್ಕೊಮ್ಮೆ ಪರಿಶೀಲನೆ ಮಾಡಿ ಮಾನದಂಡದ ಪ್ರಕಾರ ಬರ ಘೋಷಣೆ ಮಾಡಲಾಗುವುದು. 1976ರ ಬಳಿಕ ಜೂನ್ ತಿಂಗಳ ಸರಾಸರಿ ನೋಡಿದರೆ ಇಷ್ಟು ಕಡಿಮೆ ಮಳೆ ಆಗಿರಲಿಲ್ಲ. ಜೂ. 1-ಆ.26 ರವರೆಗೆ 666 ಮಿ.ಮೀ. ಮಳೆ ಆಗಬೇಕಿತ್ತು. ಆದರೆ ನಮಗೆ ಮಳೆ ಆಗಿದ್ದು ಕೇವಲ 465 ಮಿ.ಮೀ. ಮಾತ್ರ. ಒಳನಾಡು ಕರ್ನಾಟಕದಲ್ಲಿ 31% ಮಳೆ ಕೊರತೆಯಾಗಿದೆ. ದಕ್ಷಿಣ ಒಳನಾಡಿನಲ್ಲಿ 41% ಕಡಿಮೆಯಾಗಿದೆ. ಮಳೆನಾಡಿನಲ್ಲಿ 35%, ಕರಾವಳಿ ಪ್ರದೇಶದಲ್ಲಿ 24% ಮಳೆ ಕೊರತೆಯಾಗಿದೆ. 29 ಜಿಲ್ಲೆಗಳ ಪೈಕಿ 190 ತಾಲೂಕಿನಲ್ಲಿ ಮಳೆ ಕೊರತೆಯಾಗಿದೆ. 13 ತಾಲೂಕುಗಳಲ್ಲಿ ತೀವ್ರ ಕೊರತೆಯಾಗಿದೆ ಎಂದು ತಿಳಿಸಿದರು.

ಬರಪೀಡಿತ ಪ್ರದೇಶ ಅಂತ ಘೋಷಣೆ ಮಾಡಲು ಮಾನದಂಡನಿದೆ. ಈ ಸಂಬಂಧ 2020ರಲ್ಲಿ ಕೇಂದ್ರ ಕಾರ್ಯಸೂಚಿ ಬಿಡುಗಡೆ ಮಾಡಿದ್ದಾರೆ. ಟ್ರಿಗರ್ 1ರಲ್ಲಿ ಕನಿಷ್ಠ ಮೂರು ವಾರ ಡ್ರೈ ಸ್ಪೆಲ್ ಇರಬೇಕು. ಟ್ರಿಗರ್ 2ನಲ್ಲಿ ಬಿತ್ತನೆ ಪ್ರಮಾಣ ಶೇಕಡಾವಾರು, ಬೆಳೆಗಳ ಸ್ಥಿತಿಗತಿ, ಮಣ್ಣಿನ ತೇವಾಂಶ, ಅಂತರ್ಜಲದ ಪ್ರಮಾಣ, ಕೆರೆ ಕಟ್ಟೆಗಳಲ್ಲಿ, ಅಣೆಕಟ್ಟುಗಳಲ್ಲಿ ನೀರಿನ ಪ್ರಮಾಣ ನೋಡಿ ಬರ ಪೀಡಿತ ಎಂದು ಘೋಷಿಸಬಹುದಾಗಿದೆ. ಅದರಂತೆ ಹೋಬಳಿವಾರು ಗ್ರೌಂಡ್ ಟ್ರೂತ್ ಮಾಡಲಾಗಿದೆ. ಆ ಡೇಟಾ ಸಿಕ್ಕಿದ ಮೇಲೆ ಪರಿಶೀಲಿಸಿ ಬರ ಘೋಷಣೆ ಮಾಡಲಾಗಿದೆ ಎಂದರು.

60 ಲಕ್ಷ ಹೆಕ್ಟೇರ್ ಬಿತ್ತನೆ ಒಣಗಿದೆ: ರಾಜ್ಯದಲ್ಲಿ ಸುಮಾರು ಬಿತ್ತನೆ 71% ಆಗಿದೆ. ಬಿತ್ತನೆ ಆಗಿರುವುದೆಲ್ಲ ಒಣಗಿ ಹೋಗಿದೆ. 84 ಲಕ್ಷ ಹೆಕ್ಟೇರ್ ಗುರಿ ಇದ್ದು, ಅದರ ಮುಂದೆ 60 ಲಕ್ಷ ಹೆಕ್ಟೇರ್ ಬಿತ್ತನೆ ಆಗಿದೆ. ಸಂಪೂರ್ಣ ಬಿತ್ತನೆಯಾಗಿರುವುದೆಲ್ಲಾ ಒಣಗಿ ಹೋಗಿವೆ. ರಾಗಿ, ಭತ್ತ, ಮೆಕ್ಕೆ ಜೋಳ, ತೊಗರಿ ಬೆಳೆಗಳು ಒಣಗಿ ಹೋಗಿವೆ. ಇತ್ತ ತೋಟಗಾರಿಕೆ ಬೆಳೆಗಳು ಒಟ್ಟು 4.36 ಲಕ್ಷ ಹೆಕ್ಟೇರ್ ನಲ್ಲಿ ಬೆಳೆಯಬೇಕಾಗಿದ್ದು, ಆ ಪೈಕಿ 3 ಲಕ್ಷ ಹೆಕ್ಟೇರ್ ಬಿತ್ತನೆ ಆಗಿದೆ. ಅವುಗಳೂ ಮಳೆ ಇಲ್ಲದೆ ಒಣಗಿ ಹೋಗಿವೆ. ಈರುಳ್ಳಿ, ಮೆಣಸು, ಟೊಮೆಟೋ ಬೆಳೆಗಳು ಒಣಗಿ ಹೋಗಿವೆ ಎಂದು ಮಾಹಿತಿ ನೀಡಿದರು.

ಕುಡಿಯುವ ನೀರಿನ ತೀವ್ರ ಕೊರತೆ: ಕುಡಿಯುವ ನೀರಿಗೆ ಭಾರಿ ಸಮಸ್ಯೆ ಆಗಿದೆ. ಕೊಳವೆ ಬಾವಿ ನೀರು ಬರಿದಾಗುತ್ತಿದೆ. 758 ಗ್ರಾಮಗಳಲ್ಲಿ 190 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. 18 ಸ್ಥಳೀಯ ಸಂಸ್ಥೆಗಳ 114 ವಾರ್ಡ್ ನಲ್ಲಿ 48 ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ. 2,559 ಗ್ರಾ.ಪಂ. ಪೈಕಿ 2,029 ಗ್ರಾಮ ಪಂಚಾಯತಿಗಳಲ್ಲಿ ತೀವ್ರ ನೀರಿನ ಕೊರತೆ ಆಗುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಮೇವಿನ ಕೊರತೆ: ಜಾನುವಾರುಗಳಿಗೆ ಮೇವಿನ ಸಮಸ್ಯೆ ಇದೆ. 151 ಲಕ್ಷ ಮೆಟ್ರಿಕ್ ಟನ್ ಮೇವು ಇದೆ. ಇದು 33 ವಾರಗಳಿಗೆ ಮಾತ್ರ ಸಾಕಾಗುವಷ್ಟು ಇದೆ. ಕೆಲವು ತಾಲೂಕುಗಳಲ್ಲಿ 20 ವಾರಗಳಿಗಿಂತಲೂ ಕಡಿಮೆ ಮೇವು ಸಂಗ್ರಹ ಇದೆ. ಪಾವಗಡದಲ್ಲಿ 10 ವಾರಕ್ಕೂ ಕಡಿಮೆ ಅವಧಿಗೆ ಆಗುವಷ್ಟು ಮೇವು ಸಂಗ್ರಹ ಇದೆ. 49 ತಾಲೂಕುಗಳಲ್ಲಿ 20 ವಾರಕ್ಕಿಂತಲೂ ಕಡಿಮೆ ಮೇವು ಲಭ್ಯತೆ ಇದೆ. ಜಿಲ್ಲಾವಾರು ಡಿಸಿಗಳಿಗೆ ಮೇವು ಖರೀದಿಸಿ ಕೊಡುವಂತೆ ಹೇಳಿದ್ದೇವೆ ಎಂದರು.

49 ಲಕ್ಷ ರೈತರು ಬೆಳೆ ವಿಮೆ ಪಾವತಿಸಿದ್ದಾರೆ. ಹಲವು ಕಡೆ ಜನ ಗುಳೇ ಹೋಗುತ್ತಿದ್ದಾರೆ. ಬಾಗಲಕೋಟೆ, ವಿಜಯಪುರ, ಕೊಪ್ಪಳ, ವಿಜಯನಗರ, ರಾಯಚೂರು, ಯಾದಗಿರಿ, ಬಳ್ಳಾರಿ ಜನರು ಗುಳೇ ಹೋಗುವುದು ಹೆಚ್ಚಿದೆ. ವಿಬಿ ಜಿ ರಾಮ್ ಜಿ ಯೋಜನೆಯಡಿ ಹೆಚ್ಚು ಮಾನವ ದಿನ ನೀಡಲು ಡಿಸಿಗಳಿಗೆ ಸೂಚನೆ ನೀಡಲಾಗಿದೆ. ಕಳೆದ ಒಂದು ತಿಂಗಳಲ್ಲಿ ಅಂದರೆ ಜುಲೈ- ಆಗಸ್ಟ್ 24ರವರೆಗೆ 66.73 ಲಕ್ಷ ಮಾನವ ದಿನ ಸೃಜಿಸಲಾಗಿದೆ ಎಂದು ಹೇಳಿದರು.

ಬರ ನಿರ್ವಹಣೆಗೆ ಒಟ್ಟು 635 ಕೋಟಿ ರೂ. ಹಣ: ಕುಡಿಯುವ ನೀರಿನ ಉದ್ದೇಶಕ್ಕಾಗಿ ಡಿಸಿಗಳಿಗೆ 117 ಕೋಟಿ ರೂ. ಅನುದಾನ ನೀಡಲಾಗಿದೆ. ಪ್ರತಿ ಕ್ಷೇತ್ರಗಳಿಗೆ 189 ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಇದನ್ನೂ ಕುಡಿಯುವ ನೀರಿಗೆ ಉದ್ದೇಶಕ್ಕೆ ಬಳಸಲಾಗುತ್ತಿದೆ. ಇದರ ಜೊತೆಗೆ 25 ಕೋಟಿ ರೂ. ಮೇವು ಕಿಟ್ ಖರೀದಿಗಾಗಿ ನೀಡಲಾಗಿದೆ. ಕೆಎಂಎಫ್ ಗೂ ಹಣ ನೀಡುವಂತೆ ಮನವಿ ಮಾಡಿದ್ದೇವೆ. ಡಿಸಿಗಳ ಪಿಡಿ ಖಾತೆಗಳಲ್ಲಿ 329 ಕೋಟಿ ರೂ. ಹಣ ಇದೆ. ಇದನ್ನು ಬರಕ್ಕೆ ಮಾತ್ರ ಬಳಸಲು ಸೂಚನೆ ನೀಡಲಾಗಿದೆ. ಆ ಮೂಲಕ ಒಟ್ಟು ಸುಮಾರು 635 ಕೋಟಿ ರೂ. ಬರ ನಿರ್ವಹಣೆಗಾಗಿ ಹಣವನ್ನು ಇಟ್ಟಿದ್ದೇವೆ ಎಂದರು.

ತಿಂಗಳ ಅಂತ್ಯಕ್ಕೆ ಕೇಂದ್ರಕ್ಕೆ ಬರ ವರದಿ ಸಲ್ಲಿಕೆ: ಈ ತಿಂಗಳ ಕೊನೆಗೆ ಪ್ರಧಾನಿ ನರೇಂದ್ರ ಮೋದಿಗೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಕೇಂದ್ರ ಕೃಷಿ ಸಚಿವರಿಗೆ ಬರ ವರದಿ ಸಲ್ಲಿಸಲಿದ್ದೇವೆ. ಕಳೆದ ಬಾರಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಪರಿಹಾರವಾಗಿ 3,500 ಕೋಟಿ ಹಣ ನೀಡಿದ್ದರು. ಮೊದಲು ಅವರು ನಮಗೆ ಪರಿಹಾರ ಹಣ ಕೊಟ್ಟರಲಿಲ್ಲ. ಸುಪ್ರೀಂಕೋರ್ಟ್ ಹೋದ ಬಳಿಕ 3,500 ಕೋಟಿ ರೂ. ಎನ್‌ಡಿಆರ್‌ಎಫ್ ಪರಿಹಾರ ಹಣ ಕೊಟ್ಟಿದ್ದರು. ಆ ಪರಿಸ್ಥಿತಿ ಈ ಬಾರಿ ನಿರ್ಮಾಣ ಮಾಡಬೇಡಿ. ರಾಜ್ಯದ ಜನರ ದೃಷ್ಟಿಯಿಂದ, ಜಾನುವಾರು ದೃಷ್ಟಿಯಿಂದ ಮನವಿ ಕೊಟ್ಟಿರುತ್ತೇವೆ. ಅದನ್ನು ಪರಿಶೀಲಿಸಿ

3ನೇ ಪುಟಕ್ಕೆ

ಭೂಮಾನಂದ, ಅಶ್ವಿನಿ, ರಾಣೆಮ್ಮ ಪ್ರಕರಣ: ಸಿಐಡಿ ತನಿಖೆಗೆ ಆಗ್ರಹ



ಕಲ್ಯಾಣ ಸಂಜೆ ಸುದ್ದಿ

ರಾಯಚೂರು, ಆ.27-

ಜಿಲ್ಲೆಯಲ್ಲಿ ಆ.4ರಿಂದ ಆ.19ರ ಅವಧಿಯಲ್ಲಿ ನಡೆದ ಭೂಮಾನಂದ, ಅಶ್ವಿನಿ ಹಾಗೂ ರಾಣೆಮ್ಮ ಅವರ ಕೊಲೆ ಪ್ರಕರಣಗಳು ದಲಿತ ಸಮುದಾಯದಲ್ಲಿ ಆತಂಕ ಸೃಷ್ಟಿಸಿದ್ದು, ಮೂರು ಪ್ರಕರಣಗಳನ್ನೂ ಸಿಐಡಿಗೆ ವಹಿಸಿ ಸಮಗ್ರ ತನಿಖೆ ನಡೆಸಬೇಕು ಎಂದು ರಾಯಚೂರು ದಲಿತ ಸಂಘಟನೆಗಳ ಒಕ್ಕೂಟದ ಮುಖಂಡ ಎಸ್. ಮಾರೆಪ್ಪ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವದುರ್ಗ ತಾಲೂಕಿನ ಹದ್ದಿನಾಳ ಗ್ರಾಮದ ಬಹುಜನ ಮುಖಂಡ ಭೂಮಾನಂದನನ್ನು ಆ.4ರಂದು ಹತ್ಯೆ ಮಾಡಲಾಗಿದೆ. ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ಅಶ್ವಿನಿ ಹಾಗೂ ಲಿಂಗಸುಗೂರು ತಾಲೂಕಿನ ಕರಡಕಲ್ ಗ್ರಾಮದ ರಾಣೆಮ್ಮ ಅಪಹರಣ, ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳಿಗೆ ಬಲಿಯಾಗಿದ್ದಾರೆ. ಕೇವಲ 15 ದಿನಗಳ ಅಂತರದಲ್ಲಿ ನಡೆದ ಈ ಮೂರು ಘಟನೆಗಳು ಜಿಲ್ಲೆಯ ಕಾನೂನು ಸುವ್ಯವಸ್ಥೆ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿವೆ ಎಂದರು.

ಈ ಮೂರು ಪ್ರಕರಣಗಳ ಕುರಿತು ಆ.24ರಂದು ರಾಯಚೂರು ಜಿಲ್ಲೆಯಲ್ಲಿ ಬೈಕ್ ರ್‍ಯಾಲಿ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ, ಜಿಲ್ಲಾಧಿ ಕಾರಿ ರಾಜ್ಯ ಸರ್ಕಾರಕ್ಕೆ ಮೂರು ಪ್ರಕರಣಗಳ ಕುರಿತು ಸಮಗ್ರ ವರದಿ ಸಲ್ಲಿಸಿಲ್ಲ ಎಂದು ಆರೋಪಿಸಿದರು.

ಭೂಮಾನಂದ ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವ ಎಂಟನೇ ಆರೋಪಿಯನ್ನು ಇನ್ನೂ ಬಂಧಿಸಿಲ್ಲ. ಈ ಕುರಿತು ಜಿಲ್ಲಾ ಪೊಲೀಸ್ ಇಲಾಖೆಯನ್ನು ಪ್ರಶ್ನಿಸಿದರೆ, ಆರೋಪಿಯ ಬಂಧನಕ್ಕೆ ಪೂರಕ ಸಾಕ್ಷ್ಯಾಧಾರಗಳಿಲ್ಲ ಎಂದು ಹೇಳಲಾಗುತ್ತಿದೆ. ಇದು ಖಂಡನೀಯವಾಗಿದ್ದು, ಉದ್ದೇಶಪೂರ್ವಕವಾಗಿ ಆರೋಪಿಯನ್ನು ಪ್ರಕರಣದಿಂದ ಕೈಬಿಡುವ ಪ್ರಯತ್ನ ನಡೆಯುತ್ತಿದೆ ಎಂದು ಮಾರೆಪ್ಪ ಆರೋಪಿಸಿದರು.

ಮೂರು ಪ್ರಕರಣಗಳ ಎಲ್ಲ ಆರೋಪಿಗಳನ್ನು ಶೀಘ್ರ ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಪ್ರಕರಣಗಳ ವಿಚಾರಣೆಗೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಿಸಬೇಕು.

ಜಿಲ್ಲಾಧಿಕಾರಿ ವರ್ಗಾವಣೆಗೆ ಆಗ್ರಹ: ಜಿಲ್ಲೆಯಲ್ಲಿ ಆಡಳಿತ ವೈಫಲ್ಯ ಕಂಡುಬರುತ್ತಿದ್ದು, ಪ್ರಸ್ತುತ ಜಿಲ್ಲಾಧಿಕಾರಿಯನ್ನು ವರ್ಗಾವಣೆ ಮಾಡಿ ಸಮರ್ಥ ನೂತನ ಜಿಲ್ಲಾಧಿಕಾರಿಯನ್ನು ನೇಮಿಸಬೇಕು ಎಂದು ಒತ್ತಾಯಿಸಿದರು.

ಹಿರಿಯ ದಲಿತ ಹೋರಾಟಗಾರ ರವೀಂದ್ರನಾಥ್ ಪಟ್ಟಿ ಮಾತನಾಡಿ, ಗೃಹ ಸಚಿವರಿಗೆ ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ಅಶ್ವಿನಿ ಪ್ರಕರಣದ ಕುರಿತು ಮಾತ್ರ ವರದಿ ನೀಡಲಾಗಿದೆ. ಭೂಮಾನಂದ ಮತ್ತು ರಾಣೆಮ್ಮ ಪ್ರಕರಣಗಳ ಕುರಿತು

3ನೇ ಪುಟಕ್ಕೆ

ಎಸ್‌ಎಸ್‌ಎಲ್‌ಸಿ, ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಕಲ್ಯಾಣ ಸಂಜೆ ಸುದ್ದಿ

ರಾಯಚೂರು, ಆ.27-

ಜಿಲ್ಲಾ ಕುರುಬರ ಸಂಘ ಹಾಗೂ ಜಿಲ್ಲಾ ಕನಕ ನೌಕರರ ಸಂಘದ ಸಹಯೋಗದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರು ಮತ್ತು ವಿಶೇಷ ಸಾಧಕರಿಗೆ ಸನ್ಮಾನ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಕುರುಬರ ಸಂಘದ ಕಾರ್ಯಾಧ್ಯಕ್ಷ ಹನುಮಂತಪ್ಪ ಜಾಲಿಬೆಂಚಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜೂ.10 ರಂದು ಬೆಳಿಗ್ಗೆ 10.30ಕ್ಕೆ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಕಾರ್ಯಕ್ರಮ ನಡೆಯಲಿದೆ. ಈಗಾಗಲೇ ಸುಮಾರು 250 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ ಎಂದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಜೊತೆಗೆ MBBS, MD ಹಾಗೂ PSI ಪರೀಕ್ಷೆಗಳಲ್ಲಿ

3ನೇ ಪುಟಕ್ಕೆ

ಆಗಸ್ಟ್ 29 ರಂದು ಯಾದಗಿರಿಯಲ್ಲಿ ಮಾಹಿತಿ ಹಕ್ಕು ಕಾಯ್ದೆ ಕುರಿತು ಕಾರ್ಯಾಗಾರ

ರಾಯಚೂರು ಆಗಸ್ಟ್ 27 (ಕರ್ನಾಟಕ ವಾರ್ತೆ): ಕರ್ನಾಟಕ ಮಾಹಿತಿ ಆಯೋಗದ ಕಲ್ಬುರ್ಗಿ ಪೀಠ ಹಾಗೂ ಯಾದಗಿರಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಅವರ ಸಂಯುಕ್ತಾಶ್ರಯದಲ್ಲಿ ಆಗಸ್ಟ್ 29 ರಂದು ಶನಿವಾರ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆಯ ಕುರಿತು ಕಾರ್ಯಾಗಾರ ಹಾಗೂ ಸಂವಾದ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ಸಾರ್ವಜನಿಕರಿಗೆ ಮಾಹಿತಿ ಒದಗಿಸುವ ಕುರಿತಂತೆ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಅಧಿನಿಯಮ-2005ರ ಬಗ್ಗೆ ಕಾರ್ಯಾಗಾರದಲ್ಲಿ ಮಾಹಿತಿ ನೀಡಿ ಅವರೊಂದಿಗೆ ಸಂವಾದ ನಡೆಸಲಾಗುವುದು ಎಂದು ಕರ್ನಾಟಕ ಮಾಹಿತಿ ಆಯೋಗದ ಕಲ್ಬುರ್ಗಿ ಪೀಠವು ಪ್ರಕಟಣೆ ತಿಳಿಸಿದೆ.

ಆಗಸ್ಟ್ 29 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ಜಿಲ್ಲಾ ಪಂಚಾಯತ್ ಕಛೇರಿಯ (ವಿಧಾನ ಸೌಧ) ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿರುವ ಈಕಾರ್ಯಗಾ ರದಲ್ಲಿ ಕರ್ನಾಟಕ ಮಾಹಿತಿ ಆಯೋಗದ ಕಲ್ಬುರ್ಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ. ವೆಂಕಟ ಸಿಂಗ್, ಕರ್ನಾಟಕ ಮಾಹಿತಿ ಆಯೋಗ ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಡಾ: ಮಹೇಶ ವಾಲ್ವೇ ಕರ್ ಭಾಗವಹಿಸಲಿದ್ದಾರೆ.

ಕಾರ್ಯಗಾರದ ಅಧ್ಯಕ್ಷತೆ ಯಾದಗಿರಿ ಜಿಲ್ಲಾಧಿಕಾರಿಗಳಾದ ರಾಹುಲ್ ತುಕಾರಾಂ ಪಂಡವೆ ವಹಿಸಲಿದ್ದಾರೆ. ಜಿಲ್ಲಾ ಪೋಲಿಸ ವರಿಷ್ಠಾಧಿಕಾರಿಗಳಾದ ಪೃಥ್ವಿಕ ಶಂಕರ, ಇವರು ಕಾರ್ಯಾಗಾರದಲ್ಲಿ ಉಪಸ್ಥಿತರಿರುವರು. ಈ ಕಾರ್ಯಗಾರದಲ್ಲಿ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ, ತಾಲೂಕು ಮಟ್ಟದ ಹಾಗೂ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಪ್ರಥಮ ಮೇಲ್ಮನವಿ ಪ್ರಾಧಿಕಾರ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಈ ಕಾರ್ಯಾಗಾರವು ಅಧಿಕಾರಿಗಳಿಗಾಗಿ ಮಹತ್ವಪೂರ್ಣ ಕಾರ್ಯಗಾರವಾಗಿರುವುದರಿಂದ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಭಾಗವಹಿಸುವುದು ಕಡ್ಡಾಯವಾಗಿದೆ ಎಂದು ಆಯೋಗವು ಪ್ರಕಟಣೆ ತಿಳಿಸಿದೆ.

ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ರಾಯಚೂರು ಆಗಸ್ಟ್ 27

ಜಾನಪದ ಕಲಾವಿದರು, ವಿದ್ವಾಂಸರು, ವಾದ್ಯಗಾರರು, ಬುಡಕಟ್ಟು ಜನರನ್ನೊಳಗೊಂಡತೆ ಜಾನಪದ ಸಂಗಮ ಹೆಸರಿನ ಕಾರ್ಯಕ್ರಮವನ್ನು ಗಿರಿಜನ ಉಪಯೋಜನೆಯಡಿ ಸರ್ಕಾರವು ಹೊಸಯೋಜನೆಯಾಗಿ ಘೋಷಿಸಿದೆ. ಗಿರಿಜನ ಉಪಯೋಜನೆಯಡಿ ರಾಜ್ಯದ 4 ವಿಭಾಗಗಳಲ್ಲಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಜಾನಪದ ಕಲಾಪ್ರಕಾರದ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳ 16 ರಿಂದ 40ರೊಳಗಿನ ವಯೋಮಾನದ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅಕಾಡೆಮಿಯ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ರಿಜಿಸ್ಟ್ರಾರ್ ಕರ್ನಾಟಕ ಜಾನಪದ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು560002 ಇವರಿಗೆ ದಿನಾಂಕ: 16-09-2026ರ ರೊಳಗೆ ತಲುಪಿಸಬೇಕು.

ಅರ್ಜಿ ನಮೂನೆಯು ಅಕಾಡೆಮಿ ವೆಬ್‌ಸೈಟ್ ವಿಳಾಸ: ://.../ ಇಲ್ಲಿ ಪಡೆದುಕೊಳ್ಳಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿ ಇಮೇಲ್: .. ಹಾಗೂ ದೂರವಾಣಿ ಸಂಖ್ಯೆ 080-22215509ಗೆ ಸಂಪರ್ಕಿಸಬಹುದಾಗಿದೆ.

ಶಿಬಿರಾರ್ಥಿಗಳ ಆಯ್ಕೆಯಲ್ಲಿ ಅಕಾಡೆಮಿಯ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರ್.ಪಿ.ಎಲ್.ಐ ವ್ಯಾಪ್ತಿಗೆ ವಿಸ್ತರಣೆ: ಹೆಚ್ಚಿನ ಜನರಿಗೆ ಅಂಚೆ ಜೀವ ವಿಮೆ ಸೌಲಭ್ಯ

ರಾಯಚೂರು ಆಗಸ್ಟ್ 27

ರಾಯಚೂರು ಗ್ರಾಮೀಣ ಜನರ ಆರ್ಥಿಕ ಭದ್ರತೆಗೆ ಬೆನ್ನೆಲುಬಾಗಿರುವ ಗ್ರಾಮೀಣ ಅಂಚೆ ಜೀವ ವಿಮಾ (ಆರ್.ಪಿ.ಎಲ್.ಐ) ಯೋಜನೆಯ ವ್ಯಾಪ್ತಿಯನ್ನು ಭಾರತೀಯ ಅಂಚೆ ಇಲಾಖೆ ಮತ್ತಷ್ಟು ವಿಸ್ತರಿಸಿದೆ. ಹೊಸ ಬದಲಾವಣೆಯಿಂದ ಗ್ರಾಮೀಣ ಪ್ರದೇಶಗಳಿಗೆ ಸೀಮಿತವಾಗಿದ್ದ ಆರ್.ಪಿ.ಎಲ್.ಐ ಸೌಲಭ್ಯ ಇದೀಗ ಹೆಚ್ಚಿನ ಅರ್ಹ ಗ್ರಾಹಕರಿಗೆ ತಲುಪುವ ದಾರಿ ತೆರೆದಿದೆ.

ಅಂಚೆ ಜೀವ ವಿಮಾ ನಿರ್ದೇಶನಾಲಯವು 14 ಆಗಸ್ಟ್ 2026 ರಂದು ಹೊರಡಿಸಿರುವ ಮಹತ್ವದ ಆದೇಶದ ಅನ್ವಯ ಆರ್.ಪಿ.ಎಲ್.ಐ ಯೋಜನೆಯ ಅರ್ಹತಾ ಮಾನದಂಡದಲ್ಲಿ ಬದಲಾವಣೆ ಮಾಡಲಾಗಿದೆ.

ಈ ಮೊದಲು ಆರ್.ಪಿ.ಎಲ್.ಐ ಸೌಲಭ್ಯವು ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವವರಿಗೆ ಮಾತ್ರ ಲಭ್ಯವಿತ್ತು. ಇದೀಗ ಭಾರತದಲ್ಲಿರುವ ಯಾವುದೇ ಅಂಚೆ ಕಚೇರಿಯಲ್ಲಿ ಉಳಿತಾಯ ಬ್ಯಾಂಕ್ ಖಾತೆ ಹೊಂದಿರುವವರು ಅಥವಾ ಯಾವುದೇ ಶೆಡ್ಯೂಲ್ಡ್ ಬ್ಯಾಂಕ್ನಲ್ಲಿ ಚಾಲ್ತಿಯಲ್ಲಿರುವ ಉಳಿತಾಯ ಖಾತೆ ಹೊಂದಿರುವವರೂ ಆರ್.ಪಿ.ಎಲ್.ಐ ವಿಮಾ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

ಹೆಚ್ಚಿನ ಜನರಿಗೆ ಆರ್ಥಿಕ ಭದ್ರತೆಯ ಕವಚ ಗ್ರಾಮೀಣ ಎಂಬ ವ್ಯಾಪ್ತಿಯನ್ನು ಮೀರಿ ಅರ್ಹ ಗ್ರಾಹಕರ ವಲಯವನ್ನು ವಿಸ್ತರಿಸಿರುವ ಈ ನಿರ್ಧಾರ, ಅಂಚೆ ಇಲಾಖೆಯ ಜೀವ ವಿಮಾ ಸೇವೆಯನ್ನು ಇನ್ನಷ್ಟು ಜನಸಾಮಾನ್ಯರ ಬಳಿಗೆ ಕೊಂಡೊಯ್ಯುವ ಮಹತ್ವದ ಹೆಜ್ಜೆಯಾಗಿದೆ. ಜೀವನದಲ್ಲಿ ಅನಿರೀಕ್ಷಿತ ಸಂದರ್ಭಗಳು ಎದುರಾದಾಗ ಕುಟುಂಬಕ್ಕೆ ಆರ್ಥಿಕ ನೆರವಿನ ಆಸರೆಯಾಗುವ ವಿಮಾ ಯೋಜನೆಗಳ ಮಹತ್ವವನ್ನು ಈ ಬದಲಾವಣೆ ಮತ್ತಷ್ಟು ಎತ್ತಿ ತೋರಿಸುತ್ತದೆ.

ಅರ್ಹ ಗ್ರಾಹಕರು ಆರ್.ಪಿ.ಎಲ್.ಐ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ತಮ್ಮ ಹಾಗೂ ತಮ್ಮ ಕುಟುಂಬದ ಭವಿಷ್ಯಕ್ಕೆ ಆರ್ಥಿಕ ಭದ್ರತೆಯ ಬುನಾದಿ ಹಾಕಿಕೊಳ್ಳಬೇಕು ಎಂದು ರಾಯಚೂರು ಅಂಚೆ ವಿಭಾಗದ ಅಂಚೆ ಅಧೀಕ್ಷಕರಾದ ಶಿವಾನಂದ ಆರ್. ಹೀರಾಪುರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆಪ್ಟಂಬರ್ 04ರಿಂದ ಜಿಲ್ಲಾ, ತಾಲೂಕು ಮಟ್ಟದ ದಸರಾ ಕ್ರೀಡಾಕೂಟ ಆರಂಭ

ರಾಯಚೂರು ಆಗಸ್ಟ್ 27

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 2026-27ನೇ ಸಾಲಿನ ಪುರುಷರು ಹಾಗೂ ಮಹಿಳೆಯರಿಗಾಗಿ ಜಿಲ್ಲಾ ಮಟ್ಟದ ಹಾಗೂ ವಿವಿಧ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟದ ಆಯ್ಕೆ ಪ್ರಕ್ರಿಯೆಯನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲೆಯ ಮಾನವಿ ತಾಲ್ಲೂಕಿನ ದಿನಾಂಕ : 04-09-2026 ರಂದು ಸ್ಥಳ: ತಾಲ್ಲೂಕು ಹೊರಾಂಗಣ ಕ್ರೀಡಾಂಗಣ ಮಾನವಿ, ವರದಿ ಮಾಡಿಕೊಳ್ಳಬೇಕಾದ ಸಂಘಟಕರ ಹೆಸರು ಮೊ.ಸಂ: ಮಾರುತಿ ತಾ.ದೈ.ಶಿ.ಪ ಮಾನವಿ, ಮೊ ಸಂ.9986121146 ಹಾಗೂ ಮೆಹಬೂಬ್ ಮೊ ಸಂ.9611181539.

ಸಿರವಾರ ತಾಲ್ಲೂಕು: ದಿನಾಂಕ : 06-09-2026 ರಂದು ಸ್ಥಳ : ಕಿತ್ತೂರು ರಾಣಿ ಚನ್ನಮ್ಮ ವಸತಿಶಾಲೆ, ಸಿರವಾರ, ವರದಿ ಮಾಡಿಕೊಳ್ಳಬೇಕಾದ ಸಂಘಟಕರ ಹೆಸರು ಮೋ ಸಂ : ಶ್ರೀ ಮೆಹಬೂಬ್ ಪಾಷ ಮೊ ಸಂ. 9980472040 ಶ್ರೀ ಚಂದ್ರಶೇಖರ್ ಖೇಲೋ ಇಂಡಿಯಾ ತರಬೇತುದಾರರು ಮೊ ಸಂ.9886551214.

ರಾಯಚೂರು ತಾಲ್ಲೂಕು, ದಿನಾಂಕ : 07-09-2026 ರಂದು, ಸ್ಥಳ : ಮಹಾತ್ಮಗಾಂಧಿ ಜಿಲ್ಲಾ ಹೊರಾಂಗಣ ಕ್ರೀಡಾಂಗಣ ರಾಯಚೂರು, ವರದಿ ಮಾಡಿಕೊಳ್ಳಬೇಕಾದ ಸಂಘಟಕರ ಹೆಸರು ಮೋ ಸಂ : ಶ್ರೀ ಪರುಶುರಾಮ್ ತಾ.ದೈ.ಶಿ.ಪ ರಾಯಚೂರು ಮೊ ಸಂ.8861978408 ಶ್ರೀ ಹೆಚ್.ಎಲ್ ನಿತಿನ್ ಸಿದ್ದು, ಫುಟ್‌ಬಾಲ್ ತರಬೇತುದಾರರು, ಕ್ರೀಡಾಶಾಲೆ, ರಾಯಚೂರು, ಮೊ ಸಂ. 9743296326.

ದೇವದುರ್ಗ ತಾಲ್ಲೂಕು, ದಿನಾಂಕ : 07-09-2026 ರಂದು, ಸ್ಥಳ : ತಾಲ್ಲೂಕು ಹೊರಾಂಗಣ ಕ್ರೀಡಾಂಗಣ ದೇವದುರ್ಗ, ವರದಿ ಮಾಡಿಕೊಳ್ಳಬೇಕಾದ ಸಂಘಟಕರ ಹೆಸರು ಮೋ ಸಂ : ಶ್ರೀ ಬಾಲಪ್ಪ ತಾ.ದೈ.ಶಿ.ಪ ದೇವದುರ್ಗ ಮೊ ಸಂ.8277283586 ಶ್ರೀ ರಂಗನಾಥ ಮೊ ಸಂ.9591511450,

ಲಿಂಗಸುಗೂರು ತಾಲ್ಲೂಕು, ದಿನಾಂಕ : 07-09-2026 ರಂದು, ಸ್ಥಳ : ತಾಲ್ಲೂಕು ಹೊರಾಂಗಣ ಕ್ರೀಡಾಂಗಣ ಲಿಂಗಸುಗೂರು, ವರದಿ ಮಾಡಿಕೊಳ್ಳಬೇಕಾದ ಸಂಘಟಕರ ಹೆಸರು ಮೋ ಸಂ: ಶ್ರೀ ಚಂದ್ರಶೇಖರ್ ಮೊ ಸಂ.8618200650 ಶ್ರೀ ಸುನೀಲ್ ಮೊ ಸಂ.8971828923,

ಮಸ್ಕಿ ತಾಲ್ಲೂಕು, ದಿನಾಂಕ : 11-09-2026 ರಂದು ಸ್ಥಳ : ಕೆ.ಪಿ.ಎಸ್ ಪ್ರೌಢಶಾಲೆ ಮಸ್ಕಿ, ವರದಿ ಮಾಡಿಕೊಳ್ಳಬೇಕಾದ ಸಂಘಟಕರ ಹೆಸರು ಮೋ ಸಂ : ಶ್ರೀ ಶಿವಪ್ಪ ದೈ.ಶಿ.ಶಿ ಮಸ್ಕಿ ಮೊ ಸಂ.9483304481,

ಶ್ರೀ ರವೀಂದ್ರ ಮೊ ಸಂ.8660510203 ಶ್ರೀ ಸುನೀಲ್ ಮೊ ಸಂ.8971828923.

ಸಿಂಧನೂರು ತಾಲ್ಲೂಕು, ದಿನಾಂಕ : 12-09-2026, ಸ್ಥಳ : ಶ್ರೀ ಸೋಮಲಿಂಗಪ್ಪ ತಾ.ದೈ.ಶಿ.ಪ ಮೊ ಸಂ.9448418871 ಶ್ರೀ ರಾಜಶೇಖರ್ ಮೊ ಸಂ.9019553676ಗೆ ಸಂಪರ್ಕ ಮಾಡಬಹುದಾಗಿದೆ.

ಆಸಕ್ತರು ಆನ್‌ಲೈನ್ ಲಿಂಕ್: ಆನ್‌ಲೈನ್ ಲಿಂಕ್: ಣಣಠಿ:// ಜಚಿಛಿಡಿಚಿಛಿಛಿ.ಟ/ ನಲ್ಲಿ ಕಡ್ಡಾಯವಾಗಿ ನೊಂದಾವಣೆ ಮಾಡಿಕೊಳ್ಳತಕ್ಕದ್ದು. ಆಫ್‌ಲೈನ್ ನೊಂದಾವಣೆಗೆ ಅವಕಾಶವಿರುವುದಿಲ್ಲ. ದಿನಾಂಕ : 28-08-2026 ರಿಂದ 05-09-2026 ರೊಳಗೆ ಕಡ್ಡಾಯವಾಗಿ ನಿಗದಿತ ದಿನಾಂಕದೊಳಗೆ ಮೇಲೆ ತಿಳಿಸಿದ ಆನ್‌ಲೈನ್ ಲಿಂಕ್ ಮೂಲಕ ನೊಂದಾವಣೆ ಮಾಡಿಕೊಳ್ಳಬೇಕು.

ಜಿಲ್ಲಾ ಮಟ್ಟದ ದಸರಾ ಸಿ.ಎಂ ಕಪ್ -2026 ಕ್ರೀಡಾಕೂಟ: ದಿನಾಂಕ: 18-09-2026 ರಂದು ಸ್ಥಳ : ಮಹಾತ್ಮಗಾಂಧಿ ಜಿಲ್ಲಾ ಹೊರಾಂಗಣ ಕ್ರೀಡಾಂಗಣ ರಾಯಚೂರು, ಬೆಳಿಗ್ಗೆ 9:00 ಗಂಟೆಗೆ, ವರದಿ ಮಾಡಿಕೊಳ್ಳಬೇಕಾದ ಸಂಘಟಕರ ಹೆಸರು ಮೋ ಸಂ : ಶ್ರೀ ಚಂದ್ರಶೇಖರ್ ಖೇಲೋ ಇಂಡಿಯಾ ತರಬೇತುದಾರರು. ಮೊ ಸಂ.9886551214 ಶ್ರೀ ಹೆಚ್.ಎಲ್ ನಿತಿನ್ ಸಿದ್ದು, ಫುಟ್‌ಬಾಲ್ ತರಬೇತುದಾರರು, ಕ್ರೀಡಾಶಾಲೆ, ರಾಯಚೂರು ಮೊ ಸಂ.9743296326.

3ನೇ ಪುಟಕ್ಕೆ

ಆಗಸ್ಟ್ 29ರಂದು ಕರ್ನಾಟಕ ಮಾಹಿತಿ ಆಯೋಗದ ಆಯುಕ್ತ ಬಿ.ವೆಂಕಟ್ ಸಿಂಗ್ ಅವರಿಂದ ಯಾದಗಿರಿ ಜಿಲ್ಲಾ ಪ್ರವಾಸ

ರಾಯಚೂರು ಆಗಸ್ಟ್ 27

ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ಮಾಹಿತಿ ಆಯುಕ್ತ ಬಿ. ವೆಂಕಟಸಿಗ್ ಆಗಸ್ಟ್ 29ರಂದು ಯಾದಗಿರಿ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಿಗ್ಗೆ 10.30ಕ್ಕೆ ಯಾದಗಿರಿಯ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು, ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳಿಗೆ ಹಮ್ಮಿಕೊಳ್ಳಲಾಗಿರುವ ಕಾರ್ಯಾಗಾರ ಮತ್ತು ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ.

ಮಧ್ಯಾಹ್ನ 1.30ಕ್ಕೆ ಪತ್ರಿಕಾಗೋಷ್ಠಿಯನ್ನು ನಡೆಸಲಿದ್ದಾರೆ.

ಸಂಜೆ ಯಾದಗಿರಿ ಜಿಲ್ಲೆಯಿಂದ ಕೇಂದ್ರ ಸ್ಥಾನಕ್ಕೆ ಪ್ರಯಾಣ ಬೆಳಸಲಿದ್ದಾರೆ ಎಂದು ಆಯುಕ್ತರ ಆಪ್ತ ಸಹಾಯಕರಾದ ಶಿವಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿವೃದ್ಧಿ ಬಗ್ಗೆ ಪ್ರಶ್ನಿಸುವ ಮೊದಲು ಅವರ 20 ವರ್ಷಗಳ ಸಾಧನೆ ಹೇಳಲಿ: ಅಲ್ಲಮಪ್ರಭು ಪಾಟೀಲ

ಕಲಬುರಗಿ,ಆ.27-

ಕಳೆದ 20 ವರ್ಷಗಳ ಅವಧಿಯಲ್ಲಿ ತಮ್ಮ ಕುಟುಂಬದವರೇ ಶಾಸಕರಾಗಿದ್ದರೂ ಕಲಬುರಗಿ ದಕ್ಷಿಣ ಮತಕ್ಷೇತ್ರದಲ್ಲಿ ನಿರೀಕ್ಷಿತ ಅಭಿವೃದ್ಧಿ ಏಕೆ ಆಗಲಿಲ್ಲ ಎಂಬುದನ್ನು ಬಿಜೆಪಿ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಮೊದಲು ಕ್ಷೇತ್ರದ ಜನರಿಗೆ ಉತ್ತರಿಸಲಿ ಎಂದು ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ ತಿರುಗೇಟು ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಮೂರು ವರ್ಷಗಳ ಹಿಂದೆ ನನ್ನನ್ನು ಶಾಸಕನಾಗಿ ಆಯ್ಕೆ ಮಾಡಿದ ಜನರ ಬಳಿಗೆ ತೆರಳಿ, ಕ್ಷೇತ್ರದ ಅಭಿವೃದ್ಧಿ ಕುರಿತು ಪ್ರಶ್ನಿಸುವಂತೆ ಹಾಗೂ ನಿದ್ದೆಯಿಂದ ಎಚ್ಚೆತ್ತುಕೊಳ್ಳುವಂತೆ ನಾನು ಜಾಗೃತಿ ಮೂಡಿಸಿದ್ದೇನೆ. ಆದರೆ, ಕಳೆದ ಎರಡು ದಶಕಗಳಿಂದ ಕ್ಷೇತ್ರವನ್ನು ಪ್ರತಿನಿಧಿಸಿದವರು ತಮ್ಮ ಅವಧಿಯ ಸಾಧನೆ ಏನು ಎಂಬುದನ್ನು ಮೊದಲು ತಿಳಿಸಬೇಕು'' ಎಂದು ಹೇಳಿದರು.

ಅಪ್ಪ, ಅವ್ವ ಹಾಗೂ ಮಗ ಮೂವರು ಶಾಸಕರಾಗಿ ಕ್ಷೇತ್ರವನ್ನು ಪ್ರತಿನಿಧಿಸಿದರೂ ಜನರ ಸಮಸ್ಯೆಗಳಿಗೆ ಎಷ್ಟರ ಮಟ್ಟಿಗೆ ಸ್ಪಂದಿಸಿದ್ದಾರೆ ಎಂಬುದನ್ನು ಜನರೇ ನಿರ್ಧರಿಸಲಿದ್ದಾರೆ. ರೈತರು ಮತ್ತು ಬಡವರ ಸಮಸ್ಯೆಗಳ ಕುರಿತು ವಿಧಾನಸಭೆಯಲ್ಲಿ ಒಂದೇ ಒಂದು ದಿನ ಧ್ವನಿ ಎತ್ತಿದ ಉದಾಹರಣೆ ಇದೆಯೇ ಎಂದು ಪ್ರಶ್ನಿಸಿದ ಅವರು, ರೈತರಿಗೆ ಬೆಳೆ ವಿಮೆ ಪರಿಹಾರ ದೊರಕಿಸಲು ತಾವು ಸದನದಲ್ಲಿ ಧ್ವನಿ ಎತ್ತಿರುವುದನ್ನು ನಾಟಕ ಎಂದು ಬಣ್ಣಿಸುವುದು ರೈತರಿಗೇ ಮಾಡುವ ಅಪಮಾನ ಎಂದರು.

ತಾನು ಹಿಂದೂ ಎಂದು ಹೇಳಿಕೊಂಡು ಭಾಷಣ ಮಾಡುವ ಮಾಜಿ ಶಾಸಕರು ತಮ್ಮ ಅವಧಿಯಲ್ಲಿ ಒಂದಾದರೂ ದೇವಸ್ಥಾನದ ಜೀರ್ಣೋದ್ಧಾರ ಅಥವಾ ಅಭಿವೃದ್ಧಿ ಕಾಮಗಾರಿ ಕೈಗೊಂಡಿದ್ದಾರೆಯೇ ಎಂದು ಪ್ರಶ್ನಿಸಿದ ಅಲ್ಲಮಪ್ರಭು ಪಾಟೀಲ, ತಮ್ಮ ಅವಧಿಯಲ್ಲಿ ಹಡಗಿಲ್, ಉದನೂರ, ಕಣ್ಣಿ ಸೇರಿದಂತೆ ಕ್ಷೇತ್ರದ ಹಲವು ಗ್ರಾಮಗಳ ದೇವಸ್ಥಾನಗಳ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಮಾಜಿ ಶಾಸಕರು ಬೇಕಾದರೆ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಲಿ ಎಂದು ಸವಾಲು ಹಾಕಿದರು.



ಸಿಎ ಸೈಟ್‌ಗಳ ಮೂಲಕ ಹಣದ ಅವ್ಯವಹಾರ ನಡೆಸಿದ ಆರೋಪ ಎದುರಿಸುತ್ತಿರುವವರು ಹಾಗೂ 20 ಎಕರೆ ಭೂಮಿಗೆ ಸಂಬಂಧಿಸಿದ ವಿವಾದದ ಕುರಿತು ಪ್ರಶ್ನೆ ಎದುರಾದಾಗ ಮೌನವಾಗಿದ್ದವರು ಈಗ ತಮ್ಮ ಸರ್ಕಾರದ ಸಾಧನೆಗಳ ಬಗ್ಗೆ ಪ್ರಶ್ನಿಸುವುದು ಎಷ್ಟು ಸಮಂಜಸ ಎಂದು ಅವರು ಪ್ರಶ್ನಿಸಿದರು.

''ನಮ್ಮ ಅವಧಿಯ ಸಾಧನೆ ಕುರಿತು ಪ್ರಶ್ನೆ ಕೇಳುತ್ತಿರುವವರಿಗೆ ಜನರೇ ಉತ್ತರ ನೀಡುತ್ತಾರೆ. ಈಗಾಗಲೇ ಜನರು ಉತ್ತರ ನೀಡಲಾರಂಭಿಸಿದ್ದಾರೆ'' ಎಂದರು.

ಕ್ಷೇತ್ರದಲ್ಲಿ ₹16.84 ಕೋಟಿ ಅಭಿವೃದ್ಧಿ ಕಾಮಗಾರಿ

ಕಲಬುರಗಿ ದಕ್ಷಿಣ ಕ್ಷೇತ್ರದಲ್ಲಿ ಜಲಸಂಪನ್ಮೂಲ ಹಾಗೂ ಅಂತರ್ಜಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಶಾಸಕ ಅಲ್ಲಮಪ್ರಭು ಪಾಟೀಲ ಹೇಳಿದರು.

ಪಟ್ಟಣ, ಸಿಂದಗಿ, ಮೇಳಕುಂದಾ ಸೇರಿದಂತೆ ವಿವಿಧೆಡೆ ₹8 ಕೋಟಿ ವೆಚ್ಚದಲ್ಲಿ ಆಣೆಕಟ್ಟು ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ₹6.14 ಕೋಟಿ ವೆಚ್ಚದಲ್ಲಿ ಜಿನುಗು ಕೆರೆ ನಿರ್ಮಾಣ ಹಾಗೂ ಹುಣಸಿಹಡಿಲ್‌ನಲ್ಲಿ ₹1 ಕೋಟಿ ವೆಚ್ಚದಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ. ವಿಶೇಷ ಘಟಕದಡಿ 20 ಕೊಳವೆ ಬಾವಿಗಳ ನಿರ್ಮಾಣಕ್ಕೆ ₹1 ಕೋಟಿ ಸೇರಿದಂತೆ ಒಟ್ಟು ₹16.84 ಕೋಟಿ ಮೊತ್ತದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅಂತರ್ಜಲ ಅಭಿವೃದ್ಧಿಗಾಗಿ ₹24.34 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ವಿವರಿಸಿದರು.

90 ಸಾವಿರಕ್ಕೂ ಹೆಚ್ಚು ರೈತರಿಗೆ ಪರಿಹಾರ:

ಕಳೆದ ಮೂರು ವರ್ಷಗಳಲ್ಲಿ 90,168 ರೈತರಿಗೆ ಒಟ್ಟು ₹130.526 ಕೋಟಿ ಪರಿಹಾರ ನೀಡಲಾಗಿದೆ. ಸಂಕಷ್ಟದಲ್ಲಿದ್ದ ರೈತರಿಗೆ 222 ಕ್ವಿಂಟಲ್ ಕಿರು ಬಿತ್ತನೆ ಬೀಜ ವಿತರಿಸಲಾಗಿದೆ. ಇದೇ ಅವಧಿಯಲ್ಲಿ ₹10.84 ಕೋಟಿ ವೆಚ್ಚದಲ್ಲಿ 7,083 ರೈತರಿಗೆ ಬೆಳೆ ವಿಮೆ ಪರಿಹಾರ ನೀಡಲಾಗಿದೆ ಎಂದು ತಿಳಿಸಿದರು. ಗಂಗಾ ಕಲ್ಯಾಣ ಯೋಜನೆಯಡಿ 129 ಬಾವಿಗಳ ನಿರ್ಮಾಣ, ಸ್ವಾವಲಂಬಿ ಸಾರಥಿ ಯೋಜನೆಯಡಿ ವಾಹನ ವಿತರಣೆ, 120 ಫಲಾನುಭವಿಗಳಿಗೆ ವಿವಿಧ ಸಾಲ ಸೌಲಭ್ಯ ಹಾಗೂ 46 ಜನರಿಗೆ ಹೊಲಿಗೆ ಯಂತ್ರ ಸೇರಿದಂತೆ ಹಲವು ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ಕ್ಷೇತ್ರದ ರಸ್ತೆಗಳ ಸಮಸ್ಯೆಯ ಬಗ್ಗೆಯೂ ಮಾತನಾಡಿದ ಅವರು, ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಶೀಘ್ರದಲ್ಲೇ ಆರಂಭಿಸಲಾಗುವುದು. ಮುಂದಿನ ಆರು ತಿಂಗಳೊಳಗೆ ಕ್ಷೇತ್ರದ ಎಲ್ಲ ರಸ್ತೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

''ಮೊದಲು ಸತ್ಯಾಂಶ ಅರಿತು ಮಾತನಾಡುವುದನ್ನು ಕಲಿಯಬೇಕು. ತಮ್ಮ ಅವಧಿಯಲ್ಲಿ ನಡೆದಿರುವ ಲೋಪಗಳ ಹೊಣೆಯನ್ನು ಮತ್ತೊಬ್ಬರ ಮೇಲೂ ಹಾಕುವ ಪ್ರಯತ್ನ ಸರಿಯಲ್ಲ. ಲೂಟಿ ಹೊಡೆದವರು ಮತ್ತೊಬ್ಬರನ್ನೂ ತಮ್ಮ ತಕ್ಕಡಿಯಲ್ಲೇ ತೂಗುವುದು ಎಷ್ಟು ಸರಿ ಎಂಬುದನ್ನು ಕ್ಷೇತ್ರದ ಜನರೇ ನಿರ್ಧರಿಸಲಿದ್ದಾರೆ'' ಎಂದು ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ವಿರುದ್ಧ ಅಲ್ಲಮಪ್ರಭು ಪಾಟೀಲ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಮೇಯರ್ ವರ್ಷಾ ಜಾನೆ, ಗ್ಯಾರಂಟಿ ಯೋಜನೆಗಳ ಪ್ರತಿಷ್ಠಾನದ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್ ಬಾಬು ವಂಟಿ, ಸಂತೋಷ ಪಾಟೀಲ ದಣ್ಣೂರ, ಭೀಮರಾವ ಮೇಳಕುಂದಿ, ಸಂಗಮೇಶ ನಾಗನಳ್ಳಿ, ಶಿವರಾಯ ಬಾಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಬನಹಟ್ಟಿಯಲ್ಲೇ ಪ್ರಜಾ ಸೌಧ ನಿರ್ಮಾಣವಾಗಬೇಕು ಆಗ್ರಹಿಸಿ ಧರಣಿ

ಬಾಗಲಕೋಟೆ,ಆ.27-

ಬನಹಟ್ಟಿಯಲ್ಲೇ ಪ್ರಜಾ ಸೌಧ ನಿರ್ಮಾಣವಾಗಬೇಕು ಎಂದು ಒತ್ತಾಯಿಸಿ ನಡೆಯುತ್ತಿರುವ ಧರಣಿಯು 18ನೇ ದಿನಕ್ಕೆ ಕಾಲಿಟ್ಟಿದೆ.

ಬನಹಟ್ಟಿ ಪಟ್ಟಣದಲ್ಲಿ ತಾಲೂಕ ಕೇಂದ್ರ ಕಚೇರಿಯ ಕಟ್ಟಡಗಳು ನಿರ್ಮಾಣ ಆಗಬೇಕು. ತಾಲೂಕು ಕಚೇರಿಯ ನಿರ್ಮಾಣಕ್ಕೆ ಸರಕಾರ ಪ್ರಜಾ ಸೌಧ ನಿರ್ಮಾಣ ಮಾಡುತ್ತಿದೆ. ಆದರೆ ಬನಹಟ್ಟಿ ಬದಲು ರಬಕವಿ ಪಟ್ಟಣಕ್ಕೆ ಪ್ರಜಾಸೌಧ ನಿರ್ಮಾಣ ಮಾಡಲು ಮುಂದಾದ ಸರಕಾರದ ನಿರ್ಧಾರಕ್ಕೆ ಸ್ಥಳೀಯರಲ್ಲಿ ವಿರೋಧ ವ್ಯಕ್ತವಾಗಿದೆ. ಈ ಹಿನ್ನಲೆ ಬನಹಟ್ಟಿ ನಗರ ಅಭಿವೃದ್ಧಿ ಸಮಿತಿ ವತಿಯಿಂದ ಸ್ಥಳೀಯರು ಸತ್ಯಾಗ್ರಹ ಹೋರಾಟ ಹಮ್ಮಿಕೊಂಡಿದ್ದಾರೆ.

ಬನಹಟ್ಟಿ ನಗರದ ಸಿಟಿಎಸ್ ನಂಬರ್ 8822 ರಲ್ಲಿಯೇ ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ.

18ನೇ ದಿನದ ಪ್ರತಿಭಟನೆಗೆ ಬನಹಟ್ಟಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಕುರುಬ ಸಮಾಜದ ಮುಖಂಡರು ಹಾಗೂ ಸಮಾಜದ ನೂರಾರು ಮಂದಿ ಕುರಿಗಳೊಂದಿಗೆ ಆಗಮಿಸಿ ಬೆಂಬಲ ವ್ಯಕ್ತಪಡಿಸಿದರು.

ಪ್ರಜಾ ಸೌಧ ಬನಹಟ್ಟಿಯಲ್ಲೇ ನಿರ್ಮಾಣವಾಗಬೇಕು ಎಂಬ ಬೇಡಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇಲ್ಲದಿದ್ದರೆ ಉಗ್ರ ಸ್ವರೂಪದ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿಜಯಾನಂದ ಕಾಶಪ್ಪನವರ ಸೇರಿದಂತೆ ಇತರ ಹಿರಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಪ್ರತಿನಿತ್ಯ ಸರದಿ ಸತ್ಯಾಗ್ರಹ ಜೊತೆಗೆ, ಬನಹಟ್ಟಿ ನಗರದ ಬಂದ್ ಮಾಡಲಾಗಿ, ಪ್ರತಿಭಟನೆ ಮಾಡುವ ಜೊತೆಗೆ, ಮಹಿಳೆಯರು, ವಿದ್ಯಾರ್ಥಿಗಳು ಹಾಗೂ ವಿವಿಧ ಸಮಾಜದವರು, ಉದ್ಯೋಗಸ್ಥರು ಹಾಗೂ ನೇಕಾರರು ಪ್ರತಿಭಟನೆ ಭಾಗವಹಿಸಿ,ಸರಕಾರ ಗಮನ ಸೆಳೆಯುವಂತೆ ಮಾಡುತ್ತಿದ್ದಾರೆ.

ಡೇರಿ ಕ್ಲಾಸಿಕ್ ಐಸ್ ಕ್ರೀಮ್ ಘಟಕ ನಿರ್ಮಾಣ ಕಾಮಗಾರಿ ವೀಕ್ಷಿಸಿದ ಜಿಲ್ಲಾಧಿಕಾರಿ



ಕಲಬುರಗಿ,ಆ.27-

ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅವರು ಬುಧವಾರ ಶಹಾಬಾದ ರಸ್ತೆಯ ನಂದೂರು-ಕೆಸರಟಗಿ ವಸಾಹತು ಪ್ರದೇಶದ 3ನೇ ಹಂತದಲ್ಲಿ ಸುಮಾರು 290 ಕೋಟಿ ರೂ. ಹೂಡಿಕೆಯೊಂದಿಗೆ ನಿರ್ಮಾಣವಾಗುತ್ತಿರುವ ಮೆ. ಡೇರಿ ಕ್ಲಾಸಿಕ್ ಐಸ್ ಕ್ರೀಮ್ ಘಟಕ ಕಾಮಗಾರಿಗೆ ಭೇಟಿ ನೀಡಿ ಪರಿಶೀಲಿಸಿದರು.

ಸುಮಾರು 60 ಎಕರೆ ಪ್ರದೇಶದಲ್ಲಿ ತಲೆ ಎತ್ತುತ್ತಿರುವ ಉದ್ದೇಶಿತ ಘಟಕವು ಐಸ್ ಕ್ರೀಮ್, ಫ್ರೋಜನ್ ಡೆಸರ್ಟ್, ಕುಲ್ಫಿ ಸೇರಿದಂತೆ ಡೇರಿ ಪದಾರ್ಥಗಳ ಉತ್ಪನ್ನ ಜೊತೆಗೆ ಕೋಲ್ಡ್ ಸ್ಟೋರೇಜ್ ಘಟಕ ಹೊಂದಿದ್ದು, ಇದರ ಸ್ಥಾಪನೆಯಿಂದ ಸ್ಥಳೀಯವಾಗಿ 900 ಜನರಿಗೆ ಉದ್ಯೋಗ ಸಿಗುವ ಅಂದಾಜು ಹೊಂದಲಾಗಿದೆ. ಇದಲ್ಲದೆ ಡೇರಿ ಘಟಕಕ್ಕೆ ಪೂರಕವಾಗಿ ಕೈಗಾರಿಕೆಗಳು ಸಹ ಇಲ್ಲಿಗೆ ಬರಲಿರುವುದರಿಂದ ಸ್ಥಳೀಯ ಆರ್ಥಿಕ ವೇಗವಾಗಿ ಬೆಳೆಯಲು ಸಹಕಾರಿಯಾಗಲಿದೆ.

ಇದೇ ಸಂದರ್ಭದಲ್ಲಿ ವಸಾಹತು ಪ್ರದೇಶದಲ್ಲಿನ ದಾಲ್ ಮಿಲ್ ಉದ್ದಿಮೆದಾರರನ್ನು ಭೇಟಿ ಮಾಡಿ ಅವರ ಸಮಸ್ಯೆ ಆಲಿಸಿದ ಡಿ.ಸಿ ಅವರು, ವಸಾಹತು ಪ್ರದೇಶದಲ್ಲಿ (ಮಹಿಳಾ ಪಾರ್ಕ್) ಒಳಗೊಂಡಂತೆ ಕೈಗಾರಿಕೆ ಸ್ಥಾಪಿಸಲು ನಿವೇಶನ ಪಡೆದು ನಿಗದಿತ ಅವಧಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸದ ನಿವೇಶನಗಳನ್ನು ಕೂಡಲೆ ಸರ್ವೆ ಮಾಡಿ ಗುರುತಿಸಿ ಅವುಗಳನ್ನು ರದ್ದುಗೊಳಿಸಿ ಸದರಿ ನಿವೇಶನಗಳನ್ನು ಹೊಸ ಉದ್ದಿಮೆಗಳಿಗೆ ಹಂಚಿಕೆ ಮಾಡಲು ಪ್ರಕ್ರಿಯೆ ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಇದಲ್ಲದೆ ಇದೇ ಇಂಡಸ್ಟ್ರಿಯಲ್ ಏರಿಯಾದಲ್ಲಿ ಸುಮಾರು 50 ಎಕರೆ ಪ್ರದೇಶದಲ್ಲಿ ರಾಜ್ಯ ಸರ್ಕಾರದಿಂದ ಟೆಕ್ಸ್ ಟೈಲ್ ಪಾರ್ಕ್ ಸ್ಥಾಪನೆ ಕಾರ್ಯ ನೆನೆಗುದ್ದಿಗೆ ಬಿದ್ದಿದನ್ನು ಅರಿತ ಜಿಲ್ಲಾಧಿಕಾರಿಗಳು, ಯೋಜನೆ ಸಾಕಾರಗೊಳಿಸುವ ನಿಟ್ಟಿನಲ್ಲಿ ಇದಕ್ಕಿರುವ ಅಡೆತಡೆ ಕೂಡಲೆ ನಿವಾರಿಸುವಂತೆ ಡಿ.ಐ.ಸಿ. ಜಂಟಿ ನಿರ್ದೇಶಕರಿಗೆ ಡಿ.ಸಿ. ಸೂಚಿಸಿದರು.

ಆಟೋಮೋಬೈಲ್ ಕ್ಲಸ್ಟರ್ ಸ್ಥಳ ಪರಿಶೀಲನೆ:

ಅಟೋಮೋಬೈಲ್ ಘಟಕಗಳನ್ನು ಒಂದೇ ಕಡೆ ಸ್ಥಾಪಿಸುವ ಉದ್ದೇಶಿತ ಕಪನೂರ ಆಟೋಮೋಬೈಲ್ ಕ್ಲಸ್ಟರ್ ಸ್ಥಾಪನೆ ಸ್ಥಳಕ್ಕೂ ಡಿ.ಸಿ. ಅವರು ಭೇಟಿ ನೀಡಿ ಪರಿಶೀಲಿಸಿದರು. ಈಗಾಗಲೆ ಕೆ.ಐ.ಎ.ಡಿ.ಬಿ. ನಿಂದ 20 ಎಕರೆ ಪ್ರದೇಶ ಆಟೋ ಕ್ಲಸ್ಟರ್ ಗೆ ಮೀಸಲಿರಿಸಿದ್ದು, ಎಂ.ಎಸ್.ಸಿ.ಸಿ.ಡಿ.ಪಿ ಯೋಜನೆಯಡಿ ಅನುಮೋದನೆಗೆ ಸರ್ಕಾರದ ಹಂತದಲ್ಲಿ ಬಾಕಿ ಇದೆ ಎಂದು ಯೋಜನೆ ಕುರಿತು ಡಿ.ಸಿ. ಅವರಿಗೆ ಅಧಿಕಾರಿಗಳು ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಡಿ.ಸಿ ಅವರು ಇಲ್ಲಿನ ವಿವಿಧ 15 ಘಟಕಗಳ ಕಾರ್ಯವನ್ನು ಪರಿಶೀಲಿಸಿದರು.

ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ ಅಬ್ದುಲ್ ಅಜೀಜ್, ಕೆ.ಐ.ಎ.ಡಿ.ಬಿ ಕಾರ್ಯನಿರ್ವಾಹಕ ಅಭಿಯಂತ ನಾಗೇಶ, ಎ.ಇ.ಇ. ಪರಮೇಶ ಎ.ಇ. ಅನೀಲ ಮತ್ತು ಪ್ರಕಾಶ, ಜವಳಿ ಮತ್ತು ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಬಿ.ವಿಠ್ಠಲ ರಾಜು, ಉಪನಿರ್ದೇಶಕ ರಾಘವೇಂದ್ರ ಎಸ್. ಹೊಸಮನಿ ಇದ್ದರು.

ದೇವರ ಕೀರ್ತನೆ ಮಾಡುತ್ತಿದ್ದ ಭಕ್ತರ ಮೇಲೆ ಹರಿದ ಕಾರು: ಐವರ ಸಾವು

ಸುಪೌಲ್ (ಬಿಹಾರ),ಆ.27-

ಕೀರ್ತನೆ ಮಾಡುತ್ತಿದ್ದ ಭಕ್ತರ ಗುಂಪಿನ ಮೇಲೆ ವೇಗವಾಗಿ ಬಂದ ಕಾರೊಂದು ಡಿಕ್ಕಿ ಹೊಡೆದಿದ್ದಲ್ಲದೇ ಹಲವು ಜನರ ಮೇಲೆ ಹರಿದ ಪರಿಣಾಮ ಐದು ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಸುಪೌಲ್ ಜಿಲ್ಲೆಯ ಪಿಪ್ರಾ ಪೊಲೀಸ್ ಠಾಣೆ ಪ್ರದೇಶದ ಕಟೈಯಾ ಗೋಥ್ ಚೌಕ್‌ನ ರಾಷ್ಟ್ರೀಯ ಹೆದ್ದಾರಿ 327 ನಲ್ಲಿ ಮಂಗಳವಾರ ತಡರಾತ್ರಿ ಈ ಅಪಘಾತ ಸಂಭವಿಸಿದೆ.

ಪಿಪ್ರಾ ಕಡೆಯಿಂದ ವೇಗವಾಗಿ ಬರುತ್ತಿದ್ದ ಕಾರು ನಿಯಂತ್ರಣ ತಪ್ಪಿ ಜನರ ಮೇಲೆ ಹರಿದಿದೆ. ಪರಿಣಾಮ ಐದು ಜನರು ಸ್ಥಳದಲ್ಲೇ ಮೃತಪಟ್ಟರೆ, ಓರ್ವ ವ್ಯಕ್ತಿ ಗಂಭೀರವಾಗಿ ಗಾಯಗೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರನ್ನು ಕಟೈಯಾ ವಾರ್ಡ್ 11ರ ನಿವಾಸಿ ಭುವನೇಶ್ವರಿ ಯಾದವ್ ಅಲಿಯಾಸ್ ಕೊಯ್ಲಿ ಯಾದವ್ (60), ವಾರ್ಡ್ 12ರ ನಿವಾಸಿ ತಿಲ್ಯೆ ದಾಸ್ (65), ರಾಜೋ ದಾಸ್ (50), ವಾರ್ಡ್ 15ರ ನಿವಾಸಿ ಸುರೇಂದ್ರ ಯಾದವ್ (45) ಮತ್ತು ಕೃಷ್ಣ ಮೋಹನ್ ಸಾ (21) ಎಂದು ಗುರುತಿಸಲಾಗಿದೆ. ಗಾಯಾಳು ರಾಮಚಂದ್ರ ಯಾದವ್ ಅವರ ಸ್ಥಿತಿ ಗಂಭೀರವಾಗಿದೆ ಎಂದು ಹೇಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಭಜನೆ ಹಾಡುತ್ತಿದ್ದಾಗ ಹರಿದ ಕಾರು: ಜೂಲನ್ ಪರ್ವ್ ನಿಮಿತ್ತ ಬಜರಂಗಬಲಿ ದೇವಸ್ಥಾನದಲ್ಲಿ ಭಜನೆ ಮಾಡುತ್ತಿದ್ದಾಗ ಪಿಪ್ರಾದಿಂದ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಬಳಿಕ ಹಲವರ ಮೇಲೆ ಹರಿದಿದ್ದು, ಕಾರು ಸುಮಾರು 50 ಮೀಟರ್ ದೂರ ಕ್ರಮಿಸಿ ಅಂಗಡಿಯೊಂದಕ್ಕೆ ತಾಗಿ ನಿಂತಿದೆ.

ದೇವಾಲಯ ಸಂಕೀರ್ಣದ ಬಳಿ ಭಕ್ತರು ಭಕ್ತಿಗೀತೆಗಳನ್ನು ಹಾಡುವುದರಲ್ಲಿ ಮಗ್ನರಾಗಿದ್ದರು. ಈ ವೇಳೆ ವೇಗವಾಗಿ ಬಂದ ಕಾರು ಜನರ ಮೇಲೆಯೇ ಹರಿದಿದೆ. ವೇಗ ಇದ್ದುದರಿಂದ ಗ್ಯಾರೇಜ್‌ಗೆ ಡಿಕ್ಕಿ ಹೊಡೆದಿದೆ. ಸಿಬ್ಬಂದಿ ಗ್ಯಾರೇಜ್‌ನಲ್ಲಿ ಇರದ ಹಿನ್ನೆಲೆ ಮತ್ತೊಂದು ಭೀಕರ ಅಪಘಾತ ತಪ್ಪಿದಂತಾಗಿದೆ. ಕಾರಿನ ಚಾಲಕ ಸ್ಥಳದಿಂದ ಪರಾರಿಯಾಗಿದ್ದ. ಆದರೆ, ಬಳಿಕ ಹಿಡಿಯಲಾಯಿತು ಎಂದು ಪ್ರತ್ಯಕ್ಷದರ್ಶಿ ರಾಮ್ ಕುಮಾರ್ ಹೇಳಿದ್ದಾರೆ.

ಈ ಸುದ್ದಿ ಹರಡುತ್ತಿದ್ದಂತೆ, ಚಾಲಕನ ವಿರುದ್ಧ ಕ್ರಮ ಕೈಗೊಳ್ಳುವಂತೆ, ಮೃತರ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿ ಗ್ರಾಮಸ್ಥರು ಸುಪೌಲ್-ಪಿಪ್ರಾ ಮುಖ್ಯ ರಸ್ತೆ ತಡೆದು ಆಕ್ರೋಶ ವ್ಯಕ್ತಪಡಿಸಿದರು. ಪರಿಣಾಮ ಎರಡೂ ಕಡೆ ವಾಹನಗಳ ಸರತಿ ಸಾಲುಗಳು ಕಂಡುಬಂದವು.

ಘಟನೆಯ ಬಗ್ಗೆ ಮಾಹಿತಿ ಪಡೆದ ಸದರ್ ಇನ್ಸ್‌ಪೆಕ್ಟರ್ ಸಂಜಯ್ ಯಾದವ್, ಸದರ್ ಎಸ್‌ಡಿಎಂ ಮನೋಹರ್ ಕುಮಾರ್ ಸಾಹು ಮತ್ತು ಸೈಬರ್ ಡಿಎಸ್‌ಪಿ ಗೌರವ್ ಗುಪ್ತಾ, ಸ್ಥಳಕ್ಕೆ ಆಗಮಿಸಿ ಗ್ರಾಮಸ್ಥರನ್ನು ಸಮಾಧಾನಪಡಿಸಲು ಪ್ರಯತ್ನಿಸಿದರು. ಅಪಘಾತಕ್ಕೀಡಾದ ಕಾರನ್ನು ವಶಕ್ಕೆ ತೆಗೆದುಕೊಂಡು ಮುಂದಿನ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಜರಂಗಬಲಿ ದೇವಸ್ಥಾನ ಸಂಕೀರ್ಣದಲ್ಲಿ ಭಜನೆ ಹಾಡುತ್ತಿದ್ದ ಜನರ ಮೇಲೆ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಐವರು ಸಾವನ್ನಪ್ಪಿದ್ದಾರೆ.



ಎರಡೂವರೆ ಎಕರೆ ಜಮೀನಿನಲ್ಲಿ ನಳನಳಿಸಿದ ಚೆಂಡು ಹೂ: ಬರದ ನಡುವೆ ರೈತನಿಗೆ ವರವಾದ ಪರ್ಯಾಯ ಬೆಳೆ

ಬಾಗಲಕೋಟೆ,ಆ.27-

ಮುಂಗಾರು ಕೈ ಕೊಟ್ಟರೂ ಧೈರ್ಯ ಕಳೆದುಕೊಳ್ಳದ ರೈತ, ಬರದ ಛಾಯೆಯ ನಡುವೆಯೂ ಚೆಂಡು ಹೂ ಅರಳಿಸಿ ಯಶಸ್ಸು ಕಂಡಿದ್ದಾರೆ.

ಮುಧೋಳ ತಾಲೂಕಿನ ಕಿಶೋರಿ ಗ್ರಾಮದ ಪ್ರಗತಿಪರ ರೈತ ಗೋವಿಂದಪ್ಪ ಬಲಗಾನವರ ಅವರು, ನೀರಿನ ಕೊರತೆಯ ನಡುವೆ ಚೆಂಡು ಹೂ ಬೆಳೆದು ಗಮನ ಸೆಳೆದಿದ್ದಾರೆ.

ಈ ಬಾರಿ ಮುಂಗಾರು ಮಳೆ ಕೈಕೊಟ್ಟಿದ್ದರಿಂದ ರಾಜ್ಯದ ಹಲವು ಭಾಗಗಳಲ್ಲಿ ಬರದ ಆತಂಕ ಎದುರಾಗಿದೆ. ಮಳೆ ಕೊರತೆ ಕೃಷಿ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮ ಬೀರಿದೆ. ಆದರೆ, ಗೋವಿಂದಪ್ಪ ಬಲಗಾನವರ ಅವರು ಬರಕ್ಕೆ ಹೆದರದೆ ಪರ್ಯಾಯ ಬೆಳೆ ಬೆಳೆದಿದ್ದಾರೆ.


ಸುಮಾರು 2.5 ಎಕರೆ ಪ್ರದೇಶದಲ್ಲಿ ಇವರು ಚೆಂಡು ಹೂ ಬೆಳೆ ಬೆಳೆದಿದ್ದು, ಇದೀಗ ಜಮೀನು ಸಂಪೂರ್ಣ ಹಳದಿ ಬಣ್ಣದಿಂದ ಕಂಗೊಳಿಸುತ್ತಿದೆ. ನೀರಿನ ಲಭ್ಯತೆ ಕಡಿಮೆಯಿದ್ದರೂ, ಲಭ್ಯವಿರುವ ನೀರನ್ನೇ ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ಹೂವು ಉತ್ತಮವಾಗಿ ಬೆಳೆದಿದ್ದು, ಮಾರುಕಟ್ಟೆಯಲ್ಲಿ ಬೇಡಿಕೆಯೂ ಇದೆ.

ಒಂದು ಎಕರೆಗೆ ಸುಮಾರು 50ರಿಂದ 90 ಸಾವಿರ ರೂಪಾಯಿವರೆಗೆ ಆದಾಯ ನಿರೀಕ್ಷಿಸಿರುವುದಾಗಿ ರೈತ ತಿಳಿಸಿದ್ದಾರೆ. ಚೆಂಡು ಹೂ ಬೆಳೆ ಜೊತೆಗೆ ಹೂಗಳನ್ನು ಕಟಾವು ಮಾಡಿ ಮಾರುಕಟ್ಟೆಗೆ ಕಳುಹಿಸುವ ಕಾರ್ಯವೂ ನಡೆಯುತ್ತಿದೆ. ಬರದ ಪರಿಸ್ಥಿತಿಯಲ್ಲೂ ಕೃಷಿಯಲ್ಲಿ ಹೊಸ ಪ್ರಯೋಗಗಳನ್ನು ಮಾಡುವ ಮೂಲಕ ಉತ್ತಮ ಆದಾಯ ಗಳಿಸಬಹುದು ಎಂಬುದಕ್ಕೆ ಗೋವಿಂದಪ್ಪ ಬಲಗಾನವರ ಅವರ ಈ ಪ್ರಯತ್ನ ಒಂದು ನಿದರ್ಶನ ಅಂತಾರೆ ಕೃಷಿ ತಜ್ಞರು.

ಸಾಲಬಾಧೆ ತಾಳಲಾರದೆ ರೈತ ಆತ್ಮಹತ್ಯೆ

ಕಲಬುರಗಿ,ಆ.27-

ಕೃಷಿಗಾಗಿ ಮಾಡಿದ್ದ ಸಾಲ ತೀರಿಸಲಾಗದೆ ಮಾನಸಿಕವಾಗಿ ನೊಂದ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಆಳಂದ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.



ಆಳಂದ ತಾಲೂಕಿನ ಕಣಮಸ ಗ್ರಾಮದ ಶಾಂತಯ್ಯ ಮಠಪತಿ (65) ಆತ್ಮಹತ್ಯೆ ಮಾಡಿಕೊಂಡ ರೈತ ಎಂದು ಗುರುತಿಸಲಾಗಿದೆ. ಮೃತರು ತಮ್ಮ ಪತ್ನಿ ನಾಗಮ್ಮ ಹಾಗೂ ಕುಟುಂಬದೊಂದಿಗೆ ವಾಸವಾಗಿದ್ದರು. ಕುಟುಂಬಕ್ಕೆ ಸೇರಿದ ಸರ್ವೆ ನಂ.90/2ರಲ್ಲಿ 7 ಎಕರೆ 18 ಗುಂಟೆ ಜಮೀನಿದ್ದು, ದಂಪತಿ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿದ್ದರು.

ಕೃಷಿ ಮತ್ತು ಮಕ್ಕಳ ಮದುವೆಗಾಗಿ ಶಾಂತಯ್ಯ ಅವರು ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್‌ನ ತಡಕಲ್ ಶಾಖೆಯಿಂದ 1 ಲಕ್ಷ ರೂ. ಸಾಲ ಪಡೆದಿದ್ದರು. ಅಲ್ಲದೆ, ಸಂಬಂಧಿಕರಿಂದ 3 ಲಕ್ಷ ಹಾಗೂ 2.50 ಲಕ್ಷ ರೂ ಸಾಲ ಪಡೆದಿದ್ದರು ಎನ್ನಲಾಗಿದೆ. ಕಳೆದ ಮೂರು-ನಾಲ್ಕು ವರ್ಷಗಳಿಂದ ಮಳೆ ಪ್ರಮಾಣದಲ್ಲಿ ಏರುಪೇರಾಗಿ ಬೆಳೆ ನಿರೀಕ್ಷಿತ ಪ್ರಮಾಣದಲ್ಲಿ ಬಾರದ ಹಿನ್ನೆಲೆಯಲ್ಲಿ ಸಾಲ ತೀರಿಸಲು ಸಾಧ್ಯವಾಗದೆ ಶಾಂತಯ್ಯ ಅವರು ಮಾನಸಿಕವಾಗಿ ನೊಂದಿದ್ದರು. ಈ ವರ್ಷವೂ ಮಳೆ ಕೊರತೆಯಿಂದ ಬೆಳೆ ಹಾನಿಯಾಗಿದ್ದರಿಂದ ಸಾಲ ಹೇಗೆ ತೀರಿಸುವುದು ಎಂದು ಕುಟುಂಬದವರ ಬಳಿ ಆಗಾಗ್ಗೆ ಹೇಳಿಕೊಳ್ಳುತ್ತಿದ್ದರು ಎಂದು ಪತ್ನಿ ದೂರಿನಲ್ಲಿ ತಿಳಿಸಿದ್ದಾರೆ.

ಮಂಗಳವಾರ ರಾತ್ರಿ ಕುಟುಂಬದೊಂದಿಗೆ ಊಟ ಮಾಡಿ ಮಲಗಿದ್ದ ಶಾಂತಯ್ಯ, ಬುಧವಾರ ಮುಂಜಾನೆ ಸುಮಾರು 4 ಗಂಟೆಗೆ ಮನೆಯ ಅಂಗಳದಲ್ಲಿದ್ದ ಬೇವಿನ ಮರಕ್ಕೆ ಹಗ್ಗದಿಂದ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಪತ್ನಿ ನಾಗಮ್ಮ ಅವರು ನೆರೆಹೊರೆಯವರ ನೆರವಿನಿಂದ ಮೃತದೇಹವನ್ನು ಕೆಳಗಿಳಿಸಿದ್ದು, ಆಳಂದ ಸರ್ಕಾರಿ ಆಸ್ಪತ್ರೆಗೆ ಸಾಗಿಸಿ ಶವಾಗಾರದಲ್ಲಿ ಇರಿಸಲಾಗಿದೆ.

ಈ ಕುರಿತು ಆಳಂದ ಪೊಲೀಸ್ ಠಾಣೆಯಲ್ಲಿ ಯುಡಿಆರ್ ನಂ.15/2026, ಕಲಂ 194 ಬಿಎನ್‌ಎಸ್‌ಎಸ್ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.


ವಸತಿ ಶಾಲೆಯ ಮಕ್ಕಳೊಂದಿಗೆ ಡಿಸಿ ಗೂಗಲ್ ಮೀಟ್

ಕಲಬುರಗಿ,ಆ.27-

ಜಿಲ್ಲೆಯ ವಸತಿ ಶಾಲೆಯಲ್ಲಿ ಮಕ್ಕಳಿಗೆ ನೀಡಲಾಗುವ ಊಟದ ಗುಣಮಟ್ಟ, ಶಾಲೆಯಲ್ಲಿನ ಮೂಲಸೌಕರ್ಯ ಕುರಿತು ಖುದ್ದು ಶಾಲಾ ಮಕ್ಕಳಿಂದಲೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಫೀಡ್ ಬ್ಯಾಕ್ ಪಡೆದರು.

ಮಂಗಳವಾರ ಜಿಲ್ಲೆಯ ಸಮಾಜ ಕಲ್ಯಾಣ, ಅಲ್ಪಸಂಖ್ಯಾತ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯ್ದ ಸುಮಾರು 15 ವಸತಿ ಶಾಲೆಯ 6-10 ತರಗತಿ ಮಕ್ಕಳೊಂದಿಗೆ ಗೂಗಲ್ ಮೀಟ್ ಮೂಲಕ ಮಕ್ಕಳೊಂದಿಗೆ ನೇರವಾಗಿ ಮಾತನಾಡಿದ ಜಿಲ್ಲಾಧಿಕಾರಿಗಳು ಅವರ ಸಮಸ್ಯೆಗಳನ್ನು ಆಲಿಸಿದಲ್ಲದೆ ಬೆಳಗಿನ ಉಪಹಾರ ಮತ್ತು ಮಧ್ಯಾಹ್ನ-ರಾತ್ರಿ ಊಟ ಸರಿಯಾಗಿ ನೀಡಲಾಗುತ್ತಿದಿಯೇ ಎಂದು ಮಕ್ಕಳಿಂದನೆ ತಿಳಿದುಕೊಂಡರು.

ಸೋಲಾರ್ ಕೆಟ್ಟು ಹೋಗಿದ್ದು, ಹೊಸದಾಗಿ ಅಳವಡಿಸಬೇಕು. ಶುದ್ಧ ಕುಡಿಯುವ ನೀರು ಪೂರೈಕೆಯೆ ಆರ್.ಓ. ಪ್ಲ್ಯಾಂಟ್ ಅಳವಡಿಸಬೇಕು. ಶಾಲೆಗೆ ಕಂಪೌಂಡ್ ಇಲ್ಲದ ಕಾರಣ ಅಭದ್ರತೆ ಉಂಟಾಗುತ್ತಿದೆ. ವಸತಿ ನಿಲಯದಲ್ಲಿಯೂ ಗ್ರಂಥಾಲಯ ವ್ಯವಸ್ಥೆ ಮಾಡಬೇಕೆಂದು ಹೀಗೇ ಇತ್ಯಾದಿ ಬೇಡಿಕೆ ಪಟ್ಟಿ ಡಿ.ಸಿ. ಮುಂದೆ ಮಕ್ಕಳು ಇಟ್ಟರು.



ಈ ಸಂದರ್ಭದಲ್ಲಿ ಮಾತನಾಡಿದ ಡಿ.ಸಿ. ಇಕ್ರಂ ಶರೀಫ್ ಶಾಲೆಯ ಆವರಣ ಮತ್ತು ಸುತ್ತಮುತ್ತ ಸ್ವಚ್ಛತೆಗೆ ಗಮನ ಹರಿಸಲಾಗುತ್ತದೆ. ನಿಮಗೆ ಗುಣಮಟ್ಟದ ಆಹಾರ ಪೂರೈಕೆ ಜವಾಬ್ದಾರಿ ನಮ್ಮದು ಅದರ ಬಗ್ಗೆ ಚಿಂತೆ ಬೇಡ. ಸ್ಪರ್ಧಾತ್ಮಕ ಪರೀಕ್ಷೆ ಬರೆದು ನೀವು ಬಂದಿದ್ದೀರಿ. ನಿಮ್ಮ ಮುಂದಿನ ಭವಿಷ್ಯ ಚೆನ್ನಾಗಿರಲು ಕಠಿಣ ಅಭ್ಯಾಸ ಮತ್ತು ಓದಿನತ್ತ ಹೆಚ್ಚು ಸಮಯ ನೀಡಬೇಕು. ಭವಿಷ್ಯದಲ್ಲಿ ಉನ್ನತ ಸ್ಥಾನಕ್ಕೇರಲು ಸರ್ವ ಪ್ರಯತ್ನ ಮುಂದುವರೆಸಲು ಹಾಗೂ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುವಂತೆ ಮಕ್ಕಳಿಗೆ ಸ್ಫೂರ್ತಿಯ ಮಾತುಗಳನ್ನಾಡಿದರು.

ಮೂಲಸೌಕರ್ಯದ ಪಟ್ಟಿ ಕೊಡಿ:

ವಸತಿ ಶಾಲೆಯಲ್ಲಿ ಬೆಂಚ್, ವಿದ್ಯುತ್ ದುರಸ್ತಿ, ಕಟ್ಟಡ ದುರಸ್ತಿ, ಆರ್.ಓ. ಪ್ಲ್ಯಾಂಟ್ ಸೇರಿದಂತೆ ಮಕ್ಕಳ ಬೇಡಿಕೆಯಂತೆ ಶಾಲೆಗಳಿಗೆ ಬೇಕಾದ ಮೂಲ ಸೌಕರ್ಯಗಳ ಕುರಿತು ಕೂಡಲೆ ಪಟ್ಟಿ ನೀಡಿದಲ್ಲಿ ಕೆ.ಕೆ.ಆರ್.ಡಿ.ಬಿ. ಮಂಡಳಿ ಅನುದಾನ ಅಥವಾ ಇಲಾಖೆಯ ಅನುದಾನದಿಂದ ಅದೆಲ್ಲವನ್ನು ಪೂರೈಸಲಾಗುವುದು ಎಂದು ಡಿ.ಸಿ ಇಕ್ರಂ ಶರೀಫ್ ಸಂವಾದದಲ್ಲಿ ಭಾಗವಹಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಗೂಗಲ್ ಮೀಟ್ ನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ, ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣಾಧಿಕಾರಿ ಮತ್ತು ಪ್ರಭಾರಿ ಬಿ.ಸಿ.ಎಂ. ಅಧಿಕಾರಿ ಸಂಗಮೇಶ ಇದ್ದರು.

ಒಂದನೇಯ ಪುಟದಿಂದ

ರಾಜ್ಯದ 101 ತಾಲೂಕುಗಳು ಬರಪೀಡಿತ: ಸರ್ಕಾರ ಘೋಷಣೆ

ಪರಿಹಾರ ಹಣ ಕೊಡಲು ಕೋರುತ್ತೇನೆ. ಕಳೆದ ಬಾರಿ 39,000 ಕೋಟಿ ರೂ. ಬರ ನಷ್ಟ ಆಗಿತ್ತು. ಈ ಪೈಕಿ ನಾವು 18,000 ಕೋಟಿ ರೂ. ಪರಿಹಾರ ಕೊಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೆವು. ಆ ಪೈಕಿ 3,200 ಕೋಟಿ ರೂ. ಅನುದಾನ ನೀಡಿದ್ದರು ಎಂದು ಡಿಸಿಎಂ ಹೇಳಿದರು.

ಭೂಮಾನಂದ, ಅಶ್ವಿನಿ, ರಾಣೆಮ್ಮ ಪ್ರಕರಣ: ಸಿಐಡಿ ತನಿಖೆಗೆ ಆಗ್ರಹ

ಜಿಲ್ಲಾಡಳಿತದಿಂದ ಸಮಗ್ರ ವರದಿ ಸಲ್ಲಿಕೆಯಾಗಿಲ್ಲ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ ಗುಂಪು ರಾಜಕಾರಣದ ಪರಿಣಾಮ ದಲಿತರು ಬಲಿಯಾಗುತ್ತಿದ್ದಾರೆ. ಆಡಳಿತ ವ್ಯವಸ್ಥೆಯಲ್ಲಿ ವೈಫಲ್ಯ ಉಂಟಾಗಿದೆ. ಭೂಮಾನಂದ, ಅಶ್ವಿನಿ ಹಾಗೂ ರಾಣೆಮ್ಮ ಪ್ರಕರಣಗಳನ್ನು ಸಿಐಡಿಗೆ ವಹಿಸಿ, ಆರೋಪಿಗಳಿಗೆ ಕಠಿಣ ಶಿಕ್ಷೆ, ಅಗತ್ಯವಿದ್ದಲ್ಲಿ ಮರಣದಂಡನೆ ವಿಧಿಸುವವರೆಗೆ ಹಂತ ಹಂತವಾಗಿ ಹೋರಾಟ ಮುಂದುವರಿಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಎಂ.ಆರ್. ಭೇರಿ, ಶರಣಪ್ಪ ದಿನ್ನಿ, ಹೇಮರಾಜ್ ಅಸ್ಕಿಹಾಳ್, ಜೈಭೀಮ್ ವಲ್ಲಭ, ನರಸಿಂಹಲು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಉತ್ತೀರ್ಣರಾದವರಿಗೂ ವಿಶೇಷವಾಗಿ ಸನ್ಮಾನ ಮಾಡಲಾಗುವುದು. ಜಿ. ವಿನಯಕುಮಾರ್ ಅವರು ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಚಿವರು, ಸಂಸದರು, ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರು, ಕುರುಬರ ಸಮಾಜದ ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾ ಕನಕ ನೌಕರರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ವಿವಿಧ ತಾಲೂಕುಗಳ ಸಂಘಗಳ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ. ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಕೆ. ಬಸವಂತಪ್ಪ, ವೆಂಕಟೇಶ್ ಜಾಲಿಬೆಂಚಿ, ರಾಮನಗೌಡ, ರಾಮಣ್ಣ ಹನುಮಂತಪ್ಪ ಉಪಸ್ಥಿತರಿದ್ದರು.

ಸೆಪ್ಟಂಬರ್ 04ರಿಂದ ಜಿಲ್ಲಾ, ತಾಲೂಕು ಮಟ್ಟದ ದಸರಾ ಕ್ರೀಡಾಕೂಟ ಆರಂಭ

ತಾಲ್ಲೂಕು ಮಟ್ಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಷರತ್ತುಗಳು: ಆಯಾ ತಾಲೂಕಿನ ಕ್ರೀಡಾಪಟುಗಳು ಆಯಾ ತಾಲೂಕಿನಲ್ಲಿ ಮಾತ್ರ ಭಾಗವಹಿಸತಕ್ಕದ್ದು.

ಆಯಾ ತಾಲೂಕಿನ ಕ್ರೀಡಾಪಟುಗಳು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ನಿಗದಿಪಡಿಸಿದ ದಿನಾಂಕದೊಳಗೆ ನೊಂದಾವಣೆ ಮಾಡಿಕೊಂಡು ಕ್ರೀಡಾಕೂಟದಲ್ಲಿ ಭಾಗವಹಿಸತಕ್ಕದ್ದು. ಆನ್‌ಲೈನ್‌ನಲ್ಲಿ ನೊಂದಾವಣೆ ಮಾಡಿಕೊಳ್ಳದೇ ಇರುವವರಿಗೆ ಭಾಗವಹಿಸಲು ಅವಕಾಶವಿರುವುದಿಲ್ಲ.ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ವಿಜೇತರಾದವರು ಜಿಲ್ಲಾ ಮಟ್ಟದಲ್ಲಿ ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ಕಡ್ಡಾಯವಾಗಿ ನೊಂದಾವಣೆ ಮಾಡಿಕೊಳ್ಳತಕ್ಕದ್ದು.

ಕ್ರೀಡಾಪಟುಗಳು ಕ್ರೀಡಾಕೂಟದ ಆನ್‌ಲೈನ್ ಲಿಂಕ್ ಣಣಠಿ://ಜಚಿಚಿಡಿಚಿಭಿಭಿಠಿ.ಟ/ ಮೂಲಕ ನೊಂದಾವಣೆ ಮಾಡಿಕೊಳ್ಳತಕ್ಕದ್ದು.

ತಾಲ್ಲೂಕು ಮಟ್ಟದಲ್ಲಿ ವೈಯಕ್ತಿಕ ಸ್ಪರ್ಧೆಯಲ್ಲಿ ಪ್ರಥಮ ದ್ವಿತೀಯ ಸ್ಥಾನ ಪಡೆದವರು, ಗುಂಪು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದವರು ಜಿಲ್ಲಾ ಮಟ್ಟದಲ್ಲಿ ಬಾಗವಹಿಸಲು ಅವಕಾಶವಿರುತ್ತದೆ. ಜಿಲ್ಲಾ ಮಟ್ಟದಲ್ಲಿ ಭಾವಹಿಸುವವರು ಹಾಗೂ ಜಿಲ್ಲಾ ಮಟ್ಟದಲ್ಲಿ ನೇರವಾಗಿ ಭಾಗವಹಿಸುವವರು ಆನ್‌ಲೈನ್‌ನಲ್ಲಿ ನೊಂದಾಯಿಸಿಕೊಡ ಪ್ರತಿಯನ್ನು ಕಡ್ಡಾಯವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಿಲ್ಲಾ ಕಚೇರಿಗೆ ಸಲ್ಲಿಸತಕ್ಕದ್ದು. ಸಲ್ಲಿಸದೇ ಇರುವ ಕ್ರೀಡಾಪಟುಗಳಿಗೆ ಪ್ರಯಾಣ ಭತ್ಯೆ/ದಿನಭತ್ಯೆಯನ್ನು ಒದಗಿಸಲಾಗುವುದಿಲ್ಲ.

ಆನ್‌ಲೈನ್‌ನಲ್ಲಿ ನೊಂದಾವಣೆ ಮಾಡಿಕೊಳ್ಳದೇ ಇರುವ ಕ್ರೀಡಾಪಟುಗಳಿಗೆ ಕ್ರೀಡಾಕೂಟದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

ತಾಲ್ಲೂಕ ಮಟ್ಟ ಹಾಗೂ ಜಿಲ್ಲಾ ಮಟ್ಟದ ಕ್ರೀಡಾಕೂಟದ ದಿನಾಂಕದದು ನಿಗದಿತ ಸಮಯ ಹಾಗೂ ಸ್ಥಳದಲ್ಲಿ ಮುಂಚಿತವಾಗಿ ಇರತಕ್ಕದ್ದು.

ತಾಲ್ಲೂಕ ಮಟ್ಟದ ಆಯ್ಕೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಯಾವುದೇ ರೀತಿಯ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ನೀಡುವುದಿಲ್ಲ. ತಾಲ್ಲೂಕ ಮಟ್ಟದಲ್ಲಿ ವಿಜೇತರಾಗಿ ಜಿಲ್ಲಾ ಮಟ್ಟದಲ್ಲಿ ಭಾಗವಹಿಸುವ ಪುರುಷ ಕ್ರೀಡಾಪಟುಗಳಿಗೆ ಮಾತ್ರ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಯನ್ನು ಮಹಿಳಾ ಕ್ರೀಡಾಪಟುಗಳಿಗೆ ದಿನಭತ್ಯೆಯನ್ನು ಖಜಾನೆ-2ರ ಮೂಲಕ ಕ್ರೀಡಾಪಟುಗಳ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲಾಗುವುದು.

ಜಿಲ್ಲಾ ಮಟ್ಟದಲ್ಲಿ ನೇರವಾಗಿ ಭಾಗವಹಿಸುವ ಮತ್ತು ತಾಲ್ಲೂಕು ಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳು ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಝರಾಕ್ಸ್ ಪ್ರತಿ ಹಾಗೂ ಮೊಬೈಲ್ ನಂಬರ್ ಆನ್‌ಲೈನ್‌ನಲ್ಲಿ ನೊಂದಾಯಿಸಿಕೊಡ ನೊಂದಾವಣೆ ಕಡ್ಡಾಯವಾಗಿ ಜಿಲ್ಲಾ ಮಟ್ಟದ ಕ್ರೀಡಾಕೂಟ ಸಮಯದಲ್ಲಿ ಸಂಬಧಪಟ್ಟ ಕ್ರೀಡಾಕೂಟ ಸಂಘಟಕರಿಗೆ ನೀಡತಕ್ಕದ್ದು. ಪ್ರತಿಯನ್ನು ಸಲ್ಲಿಸದೇ ಇರುವ ಕ್ರೀಡಾಪಟುಗಳು ಪ್ರಯಾಭತ್ಯೆ/ದಿನಭತ್ಯೆ ಪಾವತಿ ಮಾಡಲಾಗುವುದಿಲ್ಲ ಅದಕ್ಕೆ ತಾವೇ ನೇರ ಹೊಣೆಗಾರರು. ಯಾವುದೇ ರೀತಿಯ ನಗದು ಹಣ ನೀಡುವುದಿಲ್ಲ.

ಕ್ರೀಡಾಕೂಟ ನಿಗದಿಪಡಿಸಿದ ದಿನಾಂಕ ಸಮಯದ ಮುಂಚಿತ ಆನ್‌ಲೈನ್ ಮೂಲಕ ಕಡ್ಡಾಯವಾಗಿ ನೊಂದಾವಣೆ ಆಗಿರತಕ್ಕದ್ದು. ಕ್ರೀಡಾಕೂಟ ನಿಗದಿಪಡಿಸಿದ ದಿನಾಂಕದದು ನೊಂದಾವಣೆಗೆ ಅವಕಾಶವಿರುವುದಿಲ್ಲ.

ವಿಶೇಷ ಸೂಚನೆ : ಸರ್ಕಾರದ ಶಕ್ತಿ ಯೋಜನೆ ಜಾರಿಯಲ್ಲಿರುವುದರಿಂದ ಮಹಿಳಾ ಕ್ರೀಡಾಪಟುಗಳಿಗೆ ಪ್ರಯಾಣಭತ್ಯೆಯನ್ನು ಪಾವತಿ ಮಾಡಲಾಗುವುದಿಲ್ಲ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಸೆಂಬರ್ 26ರವರೆಗೆ ವಿಶೇಷ ಮಧ್ಯಸ್ಥಿಕೆಯ ಅಭಿಯಾನ 3.0 ಆಯೋಜನೆ

ರಾಯಚೂರು ಆಗಸ್ಟ್ 27

ರಾಷ್ಟಿಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ದೇಶದ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇರುವ ಮಧ್ಯಸ್ಥಿಕೆ ಮೂಲಕ ರಾಜಿ ಆಗಬಹುದಾದ ಪ್ರಕರಣಗಳ ಕುರಿತು ವಿಶೇಷ ಮಧ್ಯಸ್ಥಿಕೆಯ ಅಭಿಯಾನ 3.0 ಅನ್ನು 2026ರ ಡಿಸೆಂಬರ್ 26ರವರೆಗೆ ಆಯೋಜಿಸಲಾಗಿದ್ದು, ಜಿಲ್ಲೆಯ ಎಲ್ಲ ನ್ಯಾಯಾಲಯಗಳಲ್ಲಿ ಮಧ್ಯಸ್ಥಿಕೆಯ ಅಭಿಯಾನ ಜರುಗಲಿದೆ.

ರಾಜಿ ಆಗಬಹುದಾದ ಪ್ರಕರಣಗಳನ್ನು ಮಧ್ಯಸ್ಥಿಕೆ ಕೇಂದ್ರಗಳಿಗೆ ಕಳುಹಿಸಿ ಅಲ್ಲಿ ವಿಶೇಷ ತರಬೇತಿ ಹೊಂದಿದ ಮಧ್ಯಸ್ಥಿಕೆಗಾರರಿಂದ ರಾಜಿ ಸಂಧಾನ ಮಾಡಿಸುವ ವ್ಯವಸ್ಥೆ ಇದಾಗಿದೆ. ಕಕ್ಷಿದಾರರು ಸದರಿ ಅಭಿಯಾನದ ಸದುಪಯೋಗ ಪಡೆದುಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ರಾಯಚೂರು ಅಥವಾ ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಸಿಂಧನೂರು, ಲಿಂಗಸೂಗೂರು, ಮಾನವಿ, ದೇವದುರ್ಗ ಕಚೇರಿಗಳನ್ನು ಸಂಪರ್ಕಿಸಬಹುದು ಎಂದು ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ.ಸಿದ್ದರಾಮಪ್ಪ ಕಲ್ಯಾಣರಾವ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಶಾಲಾ ಹಂತದಲ್ಲೇ ಹರ್ಬಲ್ ಹೇರ್ ಆಯಿಲ್ ಬಿಸ್ನೆಸ್ ಆರಂಭಿಸಿ, ಯಶಸ್ವಿಯಾದ ಬಾಲಕಿಯರು: ಅಮ್ಮನ ಮನೆಮದ್ದೇ ಪ್ರೇರಣೆ

ಯಮುನಾನಗರ(ಹರಿಯಾಣ):

ಒಬ್ಬ ತಾಯಿ ಮನೆಮದ್ದು ನಾಲ್ವರು ಸರ್ಕಾರಿ ಶಾಲಾ ವಿದ್ಯಾರ್ಥಿನಿಯರನ್ನು ಯುವ ಉದ್ಯಮಿಗಳನ್ನಾಗಿ ಬೆಳೆಸುತ್ತಿದೆ. 15 ರಿಂದ 17 ವರ್ಷ ವಯಸ್ಸಿನ ರೇಣುಕಾ, ಸಿಯಾ, ನ್ಯಾನ್ಸಿ ಮತ್ತು ದಿವ್ಯಾ ಎಂಬ ಬಾಲಕಿಯರು ತಮ್ಮ ಸ್ಟಾರ್ಟ್‌ಅಪ್ 'ಹಾರ್ವೋಲ್' ಅಡಿಯಲ್ಲಿ ಗಿಡಮೂಲಿಕೆಗಳನ್ನು ಬಳಸಿ ಕೂದಲ ರಕ್ಷಣೆಯ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ. ಮೊದಲು ತಮ್ಮ ಮನೆ ಸಮೀಪದ ಹಳ್ಳಿಗಳು ಮತ್ತು ಸ್ಥಳೀಯ ಅಂಗಡಿಗಳಲ್ಲಿ ಮಾರಾಟವಾದ ಇವರ ಉತ್ಪನ್ನಗಳಿಗೆ ಈಗ ಆಸ್ಟ್ರೇಲಿಯಾದವರೆಗೂ ಗ್ರಾಹಕರಿದ್ದಾರೆ.

ಇದು ಹರಿಯಾಣದ ಲಹರ್‌ಪುರದಲ್ಲಿರುವ ಸರ್ಕಾರಿ ಶಾಲೆಯ ವಿದ್ಯಾರ್ಥಿನಿಯರ ಸಾಧನೆ. ಈ ನಾಲ್ವರೂ ತಮ್ಮ ಅಧ್ಯಯನದ ಜತೆ ಜತೆಗೆ ಈ ಉದ್ಯಮವನ್ನೂ ನಿರ್ವಹಿಸುತ್ತಿದ್ದಾರೆ. ಈ ಹೆಣ್ಣು ಮಕ್ಕಳ ಪ್ರಯಾಣ 2025ರ ನವೆಂಬರ್ ನಲ್ಲಿ ಶಿಕ್ಷಕ ಕನ್ವಲ್ಜಿತ್ ಅವರು ಇವರನ್ನು ಕುಶಾಲ್ ಬಿಸ್ನೆಸ್ ಚಾಲೆಂಜ್ ಅಥವಾ ಕೆಬಿಸಿಗೆ ಪರಿಚಯಿಸಿದಾಗ ಶುರುವಾಗಿದೆ. ಸರ್ಕಾರಿ ಶಾಲಾ ವಿದ್ಯಾರ್ಥಿಗಳಲ್ಲಿ ಪ್ರಾಯೋಗಿಕ ವ್ಯವಹಾರದ ಕಲ್ಪನೆಗಳನ್ನು ಅಭಿವೃದ್ಧಿಪಡಿಸಲು ಕೆಬಿಸಿ ಪ್ರೋತ್ಸಾಹಿಸುತ್ತದೆ.

ಸಂಭಾವ್ಯ ಉತ್ಪನ್ನಗಳ ಕುರಿತು ಚರ್ಚೆಯ ಸಂದರ್ಭದಲ್ಲಿ ಸಿಯಾ ತನ್ನ ತಾಯಿ ರೀನಾ ದೇವಿ ಅವರು ಮನೆಯಲ್ಲಿ ತಯಾರಿಸುತ್ತಿರುವ ಗಿಡಮೂಲಿಕೆಗಳ ಎಣ್ಣೆಯ ಬಗ್ಗೆ



ಮಾತನಾಡಿದ್ದಾರೆ. ಇದು ಶಿಕ್ಷಕರ ಗಮನ ಸೆಳೆದಿದೆ. ಈ ಗಿಡಮೂಲಿಕೆಗಳ ಎಣ್ಣೆಯಲ್ಲಿರುವ ವ್ಯಾಪಾರ ಸಾಮರ್ಥ್ಯವನ್ನು ಅವರು ತಕ್ಷಣ ಕಂಡುಕೊಂಡಿದ್ದಾರೆ. ಮತ್ತು ಅದನ್ನು ಮಾರುಕಟ್ಟೆ ಉತ್ಪನ್ನವಾಗಿ ಪರಿವರ್ತಿಸಲು ವಿದ್ಯಾರ್ಥಿನಿಯರನ್ನು ಪ್ರೋತ್ಸಾಹಿಸಿದ್ದಾರೆ.

ಮಕ್ಕಳ ಕೂದಲುಗಳು ಅಕಾಲಿಕವಾಗಿ ಬೂದುಬಣ್ಣಕ್ಕೆ ತಿರುಗುತ್ತಿವೆ. ಹೀಗಾಗಿ ಕೂದಲಿನ ನೈಸರ್ಗಿಕ ಆರೈಕೆಗೆ ಗಿಡಮೂಲಿಕೆಗಳ ಎಣ್ಣೆಯನ್ನು ತಯಾರಿಸುವುದು ಮುಖ್ಯ ಎಂದು ನಮಗೆ ತೋಚಿತು ಎಂದು ವಿದ್ಯಾರ್ಥಿನಿ ಸಿಯಾ ಹೇಳಿದರು.

ಗ್ರಾಹಕರು ಉತ್ಪನ್ನಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ನಂತರ, ವಿದ್ಯಾರ್ಥಿನಿಯರು ತಮ್ಮ ಉತ್ಪನ್ನಗಳ ಪಟ್ಟಿಗೆ ಹರ್ಬಲ್ ಶಾಂಪೂ ಮತ್ತು ಹೇರ್ ಸೀರಮ್ ಸೇರಿಸಿಕೊಂಡಿದ್ದಾರೆ. ಈಗ ಹರ್ಬಲ್ ಹೆನ್ನಾವನ್ನೂ ಪ್ರಾರಂಭಿಸುವ ತಯಾರಿಯಲ್ಲಿದ್ದಾರೆ.

ಈ ಕಲ್ಪನೆಯು ಕುಶಾಲ್ ಬಿಸ್ನೆಸ್ ಚಾಲೆಂಜ್‌ನಲ್ಲಿ ವಿದ್ಯಾರ್ಥಿನಿಯರಿಗೆ ವಿಶೇಷ ಮನ್ನಣೆ ತಂದುಕೊಟ್ಟಿತು. ಹಾರ್ವೋಲ್ ಸ್ಟಾರ್ಟ್ ಅಪ್ ಗೆ ಶಾಲಾ, ಬ್ಲಾಕ್ ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಸಿಕ್ಕಿದೆ. ನಂತರ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಮೊದಲ 10 ತಂಡಗಳಲ್ಲಿ ಸ್ಥಾನ ಪಡೆದಿದೆ. ಈ ತಂಡವು ಒಟ್ಟು 1 ಲಕ್ಷ ರೂಪಾಯಿ ಬಹುಮಾನದ ಹಣವನ್ನೂ ಪಡೆದಿದೆ.

ನಾವು ಜಿಲ್ಲಾ ಮಟ್ಟದಲ್ಲಿ 25,000 ರೂಪಾಯಿ ಮತ್ತು



ರಾಜ್ಯ ಮಟ್ಟದಲ್ಲಿ 75,000 ರೂಪಾಯಿ ಬಹುಮಾನ ಪಡೆದೆವು ಎಂದು ವಿದ್ಯಾರ್ಥಿನಿ ರೇಣುಕಾ ಹೇಳಿದರು. ಬಹುಮಾನದ ಹಣವನ್ನು ನಮ್ಮಲ್ಲಿ ವಿಭಜಿಸುವ ಅಥವಾ ಖರ್ಚು ಮಾಡುವ ಬದಲು ಅದನ್ನು ಹೊಸ ವ್ಯವಹಾರದಲ್ಲಿ ಹೂಡಿಕೆ ಮಾಡಿದ್ದಾರೆ.

ನಾವು ಆರಂಭದಲ್ಲಿ ಉತ್ಪನ್ನಗಳನ್ನು ಮನೆಯಲ್ಲೇ ತಯಾರಿಸಿ ಪ್ಯಾಕ್ ಮಾಡಿದೆವು. ಮಾರಾಟ ಹೆಚ್ಚಾದಂತೆ ಒಂದು ಅಂಗಡಿಯನ್ನು ಬಾಡಿಗೆಗೆ ತೆಗೆದುಕೊಂಡು ನಮ್ಮ ಕಾರ್ಯಚಟುವಟಿಕೆಗಳನ್ನು ಅಲ್ಲಿಗೆ ಸ್ಥಳಾಂತರಿಸಿದೆವು. ಈಗ ಈ ಸ್ಥಳವು ಉತ್ಪಾದನೆ ಮತ್ತು ವ್ಯಾಪಾರ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಅವರು ತಿಳಿಸಿದರು.

ವಿದ್ಯಾರ್ಥಿನಿಯರ ತಂಡಕ್ಕೆ ಮೊದಲು ಗ್ರಾಹಕರನ್ನು ಹುಡುಕುವುದು ಸುಲಭವಾಗಿರಲಿಲ್ಲ. ಹಳ್ಳಿಗಳಲ್ಲಿ ಸಭೆಗಳನ್ನು ಮಾಡಿದ್ದಾರೆ. ಅಲ್ಲಿ ಉತ್ಪನ್ನಗಳನ್ನು ಹೇಗೆ ತಯಾರಿಸಲಾಗುತ್ತದೆ ಎಂಬುದನ್ನು ಜನರಿಗೆ ವಿವರಿಸಿದ್ದಾರೆ, ಜನರೊಂದಿಗೆ ಅವುಗಳಿಗೆ ಸೇರಿಸಲಾದ ಪದಾರ್ಥಗಳ ಮಾಹಿತಿ ನೀಡಿದ್ದಾರೆ. ನಂತರ ಉತ್ಪನ್ನಗಳನ್ನು ಸಂಗ್ರಹಿಸಲು ಸಣ್ಣ ಸ್ಥಳೀಯ ಅಂಗಡಿಗಳನ್ನು ಸಂಪರ್ಕಿಸಿದ್ದಾರೆ.

ಕೇವಲ ಬಾಯಿ ಮಾತಿನ ಪ್ರಚಾರ ಕ್ರಮೇಣ ಈ ಉದ್ಯಮ ಬೆಳೆಯಲು ನೆರವಾಗಿದೆ. ಹೆಚ್ಚೆಚ್ಚು ಗ್ರಾಹಕರು ಇವರು ತಯಾರಿಸಿದ ಗಿಡಮೂಲಿಕೆಗಳ ತೈಲವನ್ನು ಬಳಸಲು ಶುರು ಮಾಡಿದಂತೆ ಮತ್ತು ತಮ್ಮ ಅನುಭವವನ್ನು ಹಂಚಿಕೊಂಡಂತೆ ಉತ್ಪನ್ನಗಳು ನೆರೆಹೊರೆಯ ಅಂಗಡಿಗಳನ್ನೂ ಮೀರಿ ದೊಡ್ಡ ಮಾರುಕಟ್ಟೆಗಳನ್ನು ತಲುಪಲು ಪ್ರಾರಂಭಿಸಿದವು.

ಮುಂದೆ ವಿದ್ಯಾರ್ಥಿಗಳು ಹಾರ್ವೋಲ್‌ಗಾಗಿ ಇನ್‌ಸ್ಟಾಗ್ರಾಮ್ ಪೇಜ್ ರಚಿಸಿದ್ದಾರೆ. ಈ ವೇದಿಕೆಯಲ್ಲಿ ಪೋಸ್ಟ್ ಮಾಡಲಾದ ಉತ್ಪನ್ನಗಳ ಚಿತ್ರಗಳು, ಉತ್ಪನ್ನ ವಿವರಗಳು ಮತ್ತು ಗ್ರಾಹಕರ ಪ್ರತಿಕ್ರಿಯೆಗಳು ಅವರ ಹತ್ತಿರದ ಸುತ್ತಮುತ್ತಲಿನ, ಹೊರಗಿನ ಖರೀದಿದಾರರೊಂದಿಗೆ ಸಂಪರ್ಕ ಸಾಧಿಸಲು ಸಹಾಯ ಮಾಡಿದೆ ಮತ್ತು ನಿಯಮಿತವಾಗಿ ಬೇಡಿಕೆಗಳನ್ನು ತಂದು ಕೊಟ್ಟಿದೆ.

ಈ ಮಕ್ಕಳ ಮೊದಲ ವಿದೇಶಿ ವ್ಯವಹಾರವು ಆಸ್ಟ್ರೇಲಿಯಾದಲ್ಲಿ ವಾಸಿಸುವ ತಮ್ಮ ಸಂಬಂಧಿಕರೊಬ್ಬರಿಗೆ ಹಾರ್ವೋಲ್ ಉತ್ಪನ್ನ ಖರೀದಿಸಿದ ಗ್ರಾಹಕರ ಮೂಲಕ ಬಂದಿದೆ. ಮಕ್ಕಳ ಸಂಬಂಧಿ ಉತ್ಪನ್ನವನ್ನು ಇಷ್ಟಪಟ್ಟಿದ್ದಾರೆ ಎಂದು ವರದಿಯಾಗಿದೆ ಮತ್ತು ವಿದ್ಯಾರ್ಥಿಗಳು ನಂತರ ಆಸ್ಟ್ರೇಲಿಯಾದಿಂದ ಮೆಚ್ಚುಗೆ ಪಡೆದಿದ್ದಾರೆ. ನಾವು ಈಗ ಇಟಲಿಯಿಂದಲೂ ಆರ್ಡರ್ ಸ್ವೀಕರಿಸಿದ್ದೇವೆ ಎಂದು ಸಿಯಾ ಹೇಳಿದ್ದಾರೆ. ವಿದೇಶಿ ವ್ಯಾಪ್ತಿಯ ವ್ಯಾಪಾರ ಸಾಧಾರಣವಾಗಿರಬಹುದು, ಆದರೆ ಇದು ಸರ್ಕಾರಿ ಶಾಲೆಯ ತರಗತಿಯಲ್ಲಿ ಶುರುವಾದ ಉದ್ಯಮಕ್ಕೆ ಒಂದು ಪ್ರಮುಖ ಮೈಲಿಗಲ್ಲು. ಹರಿಯಾಣವನ್ನು ಮೀರಿ ಹೆಚ್ಚಿನ ಗ್ರಾಹಕರನ್ನು ಹುಡುಕಲು ನಮಗೆ ಸಾಮಾಜಿಕ ಮಾಧ್ಯಮ ಸಹಾಯ ಮಾಡುತ್ತದೆ ಎಂಬುದು ಈ ಹುಡುಗಿಯರ ನಿರೀಕ್ಷೆ.

ನಾಲ್ವರು ಉದ್ಯಮಿಗಳಲ್ಲಿ ಒಬ್ಬರಾದ ದಿವ್ಯಾ, ನಮ್ಮ ತಂಡ 2025ರ ನವೆಂಬರ್ ನಲ್ಲಿ ಕಾರ್ಯಾಚರಣೆ ಪ್ರಾರಂಭಿಸಿದಾಗಿನಿಂದ ಸುಮಾರು 1 ಲಕ್ಷ ರೂಪಾಯಿ ಗಳಿಸಿದೆ ಎಂದು ಹೇಳಿದರು. ನಮ್ಮ ವ್ಯವಹಾರ ಸುಮಾರು ಶೇ.50 ರಷ್ಟು ಲಾಭಾಂಶ ನೀಡುತ್ತಿದೆ, ಸಾಮಾಜಿಕ ಮಾಧ್ಯಮದ ಮೂಲಕ ಆರ್ಡರ್‌ಗಳು ಸ್ಥಳೀಯ ಮಾರಾಟದೊಂದಿಗೆ ಸ್ಥಿರವಾಗಿ ಹೆಚ್ಚುತ್ತಿವೆ ಎಂದು ತಿಳಿಸಿದರು.

ಹಾರ್ವೋಲ್‌ನ ಗಿಡಮೂಲಿಕೆ ಎಣ್ಣೆಯನ್ನು ಕಲೋಂಜಿ, ಮೆಂತ್ಯ, ಭೃಂಗರಾಜ್ ಮತ್ತು ಲೈಕೋರೈಸ್‌ನಂತಹ ಪದಾರ್ಥಗಳನ್ನು ಬಳಸಿ ತಯಾರಿಸಲಾಗುತ್ತದೆ. ಕರಿಬೇವು ಮತ್ತು ಇತರ ಕೆಲವು ಪದಾರ್ಥಗಳನ್ನು ವಿದ್ಯಾರ್ಥಿಗಳ ಹಳ್ಳಿಗಳ ಸುತ್ತಮುತ್ತಲಿನ ಹೊಲಗಳು ಮತ್ತು ಪ್ರದೇಶಗಳಿಂದ ಸಂಗ್ರಹಿಸಲಾಗುತ್ತದೆ. ಇವುಗಳನ್ನು ಎಣ್ಣೆಗೆ ಸೇರಿಸುವ ಮೊದಲು ಪದಾರ್ಥಗಳನ್ನು ಸ್ವಚ್ಛಗೊಳಿಸಿ ತಯಾರಿಸಲಾಗುತ್ತದೆ, ನಂತರ ಅದನ್ನು ಕಡಿಮೆ ಉರಿಯಲ್ಲಿ ಬೇಯಿಸಲಾಗುತ್ತದೆ. ಅದು ತಣ್ಣಗಾದ ನಂತರ ಎಣ್ಣೆಯನ್ನು ಬಾಟಲಿಗಳಲ್ಲಿ ತುಂಬಿ ಮಾರಾಟಕ್ಕೆ ಪ್ಯಾಕ್ ಮಾಡುತ್ತಾರೆ.

ಗಿಡಮೂಲಿಕೆಗಳ ಎಣ್ಣೆಗೆ ಸಿಕ್ಕ ಪ್ರತಿಕ್ರಿಯೆಯಿಂದ ಉತ್ತೇಜಿತರಾದ ಈ ಮಕ್ಕಳು ಗಿಡಮೂಲಿಕೆಯ ಶಾಂಪೂ ಮತ್ತು ಹೇರ್ ಸೀರಮ್ ಪರಿಚಯಿಸಿದ್ದಾರೆ. ಒಂದು ಪ್ಯಾಕ್ ಗಿಡಮೂಲಿಕೆಗಳ ಶಾಂಪೂ ಬೆಲೆ 150 ರೂ. ಗ್ರಾಹಕರಿಂದ ಬಂದ ಸಲಹೆಗಳು ಮತ್ತು ಪ್ರತಿಕ್ರಿಯೆಯ ಆಧಾರದ ಮೇಲೆ ಇವರು ಇನ್ನೂ ಹೊಸ ಉತ್ಪನ್ನಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಹೆಚ್ಚುತ್ತಿರುವ ಕೆಲಸದ ಹೊರೆಯ ಹೊರತಾಗಿಯೂ ವಿದ್ಯಾರ್ಥಿಗಳು ಶಾಲೆ ತಪ್ಪಿಸಿಕೊಂಡವರಲ್ಲ. ತಮ್ಮ ತರಗತಿಗಳು ಮತ್ತು ಶೈಕ್ಷಣಿಕ ಕೆಲಸವನ್ನು ಮುಂದುವರಿಸುತ್ತಾ ಪ್ರತಿದಿನ ಸುಮಾರು ಒಂದು ಗಂಟೆ ಸಮಯವನ್ನು ತಮ್ಮ ಸ್ಟಾರ್ಟ್‌ಅಪ್‌ಗೆ ಮೀಸಲಿಡುತ್ತಿದ್ದಾರೆ ಎಂದು ಅವರ ಶಿಕ್ಷಕರು



ಹೇಳುತ್ತಾರೆ.

ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು ಅಥವಾ ಅಡಿಯಲ್ಲಿ ಶಾಲೆಯಲ್ಲಿ ಕೌಶಲ್ಯ ಆಧಾರಿತ ಶಿಕ್ಷಣ ನೀಡಲಾಗುತ್ತಿದೆ ಎಂದು ಶಿಕ್ಷಕ ಮಾನ್ ಸಿಂಗ್ ಹೇಳಿದರು. ಕುಶಾಲ್ ಬಿಸಿನೆಸ್ ಚಾಲೆಂಜ್‌ನ ಎರಡನೇ ಹಂತದಲ್ಲಿ ಸುಮಾರು ಆರು ವ್ಯವಹಾರ ಪ್ರಸ್ತಾಪಗಳು ಹೊರಹೊಮ್ಮಿದವು. ಈ ಪೈಕಿ ಈ ಹುಡುಗಿಯರ ಗಿಡಮೂಲಿಕೆ ತೈಲ ಪರಿಕಲ್ಪನೆಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸಲು ಆಯ್ಕೆ ಮಾಡಲಾಯಿತು ಎಂದು ಹೇಳಿದರು.

ಇನ್ನೋರ್ವ ಶಿಕ್ಷಕ ಕೈಲಾಶ್ ಚಂದ್ ಅವರು ಮಾತನಾಡಿ, ವಿದ್ಯಾರ್ಥಿಗಳು ಶಾಲಾ ಸ್ಪರ್ಧೆಯಿಂದ ಜಿಲ್ಲಾ ಸುತ್ತಿನವರೆಗೆ ನಿರಂತರವಾಗಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಮುಂದೆ ರಾಜ್ಯ ಮಟ್ಟದಲ್ಲೂ ಮನ್ನಣೆ ಗಳಿಸಿದರು ಎಂದು ಹೇಳಿದರು. ಈ ಹುಡುಗಿಯರು ಸಾಧಾರಣ ಆರ್ಥಿಕ ಸ್ಥಿತಿ ಹೊಂದಿರುವ ಕುಟುಂಬಗಳಿಂದ ಬಂದವರಾಗಿದ್ದು, ಅಧ್ಯಯನದಲ್ಲೂ ಉತ್ತಮ ಸಾಧನೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಶಾಲಾ ಆಡಳಿತ ಮಂಡಳಿಯು ಈ ಹೆಣ್ಣು ಮಕ್ಕಳ ಪೋಷಕರೊಂದಿಗೆ ಮಾತನಾಡಿ ಅವರ ವಿಶ್ವಾಸ ಗಳಿಸಿ, ನಂತರ ಗಿಡಮೂಲಿಕೆ ತೈಲ ವ್ಯವಹಾರವನ್ನು ಮುಂದುವರಿಸಲು ಪ್ರೋತ್ಸಾಹಿಸಿದೆ.

ಪ್ರವಾಹದಿಂದ ನೇಪಾಳ ತತ್ತರ

ಕಠ್ಮಂಡು, ಆ.27- ನೇಪಾಳದ ಟಿಬೆಟ್ ಗಡಿ ಪ್ರದೇಶದ ಭೋಟೆ ಕೋಶಿ ನದಿಯಲ್ಲಿ ಸಂಭವಿಸಿದ ವಿನಾಶಕಾರಿ ಹಠಾತ್ ಪ್ರವಾಹದಿಂದ ಅಪಾರ ಸಾವುನೋವು ಸಂಭವಿಸಿದ್ದು, ದೇಶದಲ್ಲಿ ತೀವ್ರ ಆತಂಕದ ವಾತಾವರಣ ನಿರ್ಮಾಣವಾಗಿದೆ.ಹಿಮನದಿ ಕುಸಿತ ಹಾಗೂ ಭೂಕಂಪನ ಚಟುವಟಿಕೆಯಿಂದ ಉಂಟಾದ ಈ ದುರಂತದಲ್ಲಿ ಸಾವಿನ ಸಂಖ್ಯೆ 165ಕ್ಕೆ ಏರಿಕೆಯಾಗಿದೆ ಎಂದು ನೇಪಾಳ ಪೊಲೀಸರು ಹಾಗೂ ರಾಷ್ಟ್ರೀಯ ವಿಪತ್ತು ಅಪಾಯ ಕಡಿತ ಮತ್ತು ನಿರ್ವಹಣಾ ಪ್ರಾಧಿಕಾರ ದೃಢಪಡಿಸಿದೆ.

ನೇಪಾಳದಲ್ಲಿ ಸಂಭವಿಸಿದ ಭೀಕರ ಪ್ರವಾಹದಲ್ಲಿ 300ಕ್ಕೂ ಹೆಚ್ಚು ಭಾರತೀಯರು ನಾಪತ್ತೆಯಾಗಿರುವ ಸಾಧ್ಯತೆಯಿದೆ ಎಂದು ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ತಿಳಿಸಿದ್ದಾರೆ. ಸಂವಹನ ಜಾಲಗಳು ಹಾಗೂ ವಿದ್ಯುತ್ ಸಂಪರ್ಕ ಕಡಿತಗೊಂಡಿರುವುದರಿಂದ ಅವರೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂದು ನೇಪಾಳದಲ್ಲಿರುವ ಭಾರತೀಯ ರಾಯಭಾರಿ ನವೀನ್ ಶ್ರೀವಾಸ್ತವ ತಿಳಿಸಿದ್ದಾರೆ.

ನೇಪಾಳದ ವಿಪತ್ತು ನಿರ್ವಹಣಾ ಸಂಸ್ಥೆಯ ಪ್ರಕಾರ, ಒಟ್ಟು 823 ಮಂದಿ ಇನ್ನೂ ಸಂಪರ್ಕಕ್ಕೆ ಸಿಗುತ್ತಿಲ್ಲ. ಇವರಲ್ಲಿ ನೂರಾರು ವಿದೇಶಿ ಪ್ರವಾಸಿಗರು ಹಾಗೂ ಸ್ಥಳೀಯರು ಸೇರಿದ್ದಾರೆ. ಚೀನಾದ ಸರ್ಕಾರಿ ಮಾಧ್ಯಮದ ವರದಿ ಪ್ರಕಾರ, ಟಿಬೆಟ್‌ನಲ್ಲೂ 260 ವಿದೇಶಿ ಪ್ರಜೆಗಳು ಸೇರಿದಂತೆ 558 ಮಂದಿ ನಾಪತ್ತೆಯಾಗಿದ್ದಾರೆ.ಅಮೆರಿಕ ಭೂವೈಜ್ಞಾನಿಕ ಸಮೀಕ್ಷೆಯ ಪ್ರಕಾರ, ಇದು ಸಾಂಪ್ರದಾಯಿಕ ಭೂಕಂಪದಿಂದ ಉಂಟಾದ ಪ್ರವಾಹವಲ್ಲ. ಬದಲಾಗಿ ಹಿಮನದಿ ಕುಸಿತ ಹಾಗೂ ಶಿಲಾಖಂಡರಾಶಿಗಳ ಹರಿವಿನಿಂದ ಉಂಟಾದ ಹಠಾತ್ ಪ್ರವಾಹವಾಗಿದೆ.

ಭಾರತದಿಂದ ನೆರವು

ಪ್ರಧಾನಿ ನರೇಂದ್ರ ಮೋದಿ ಅವರು ನೇಪಾಳದ ಪ್ರಧಾನಿ ಬಾಲೇಂದ್ರ ಶಾ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಅಗತ್ಯವಿರುವ ಎಲ್ಲ ಮಾನವೀಯ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ. ಇದರ ಭಾಗವಾಗಿ ಭಾರತೀಯ ವಾಯುಪಡೆಯ ಸಿ-130ಜೆ ವಿಮಾನದ ಮೂಲಕ 10 ಟನ್ ಪರಿಹಾರ ಸಾಮಗ್ರಿಗಳನ್ನು ನೇಪಾಳಕ್ಕೆ ಕಳುಹಿಸಲಾಗಿದೆ. ಔಷಧಿಗಳು, ತಾತ್ಕಾಲಿಕ ಆಶ್ರಯ ಸಾಮಗ್ರಿಗಳು ಹಾಗೂ ಕಂಬಳಿಗಳು ಇದರಲ್ಲಿ ಸೇರಿವೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ತಿಳಿಸಿದ್ದಾರೆ.

ರಾಜ್ಯಗಳ ಸಹಾಯವಾಣಿ

ಕರ್ನಾಟಕ, ಬಿಹಾರ, ಉತ್ತರ ಪ್ರದೇಶ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳು ತಮ್ಮ ತುರ್ತು ಸಹಾಯವಾಣಿಗಳನ್ನು ಸಕ್ರಿಯಗೊಳಿಸಿವೆ. ಕರ್ನಾಟಕದ ನಿವಾಸಿಗಳು ನೆರವಿಗಾಗಿ 1070 ಅಥವಾ 080-22253707 ಸಂಖ್ಯೆಗೆ ಸಂಪರ್ಕಿಸಬಹುದು.ಅಮೆರಿಕ ಸರ್ಕಾರ 5 ಲಕ್ಷ ಡಾಲರ್ ತುರ್ತು ನೆರವು ಘೋಷಿಸಿದ್ದು, ಪರಿಣಿತರ ತಂಡವನ್ನೂ ಕಳುಹಿಸುತ್ತಿದೆ. ಆಸ್ಟ್ರೇಲಿಯಾ ಸರ್ಕಾರ ತನ್ನ ನಾಪತ್ತೆಯಾದ ನಾಗರಿಕರ ಪತ್ತೆಗೂ ಕ್ರಮ ಕೈಗೊಂಡಿದೆ.

ಭಾರತದ ಗಡಿ ಜಿಲ್ಲೆಗಳಾದ ಉತ್ತರ ಪ್ರದೇಶ, ಬಿಹಾರ ಹಾಗೂ ಉತ್ತರಾಖಂಡದಲ್ಲಿ ನದಿ ನೀರಿನ ಮಟ್ಟ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಹೈಅಲರ್ಟ್ ಘೋಷಿಸಲಾಗಿದೆ. ರಕ್ಷಣಾ ಪಡೆಗಳು ಹಾಗೂ ಹೆಲಿಕಾಪ್ಟರ್‌ಗಳ ನೆರವಿನಿಂದ ಪೀಡಿತ ಪ್ರದೇಶಗಳಲ್ಲಿ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.

ಭಾರತೀಯರ ಸ್ಥಿತಿ ಇನ್ನೂ ಆತಂಕಕಾರಿ

ಈ ದುರಂತದಲ್ಲಿ ಭಾರತೀಯರ ನಾಪತ್ತೆ ಕುರಿತು ವಿವಿಧ ಹಂತಗಳಲ್ಲಿ ವಿಭಿನ್ನ ಅಂಕಿಅಂಶಗಳು ಹೊರಬಿದ್ದಿವೆ. ಆರಂಭದಲ್ಲಿ ನೇಪಾಳ ಪ್ರವಾಸೋದ್ಯಮ ಮಂಡಳಿಯ ಪಟ್ಟಿಯಲ್ಲಿ 105 ಭಾರತೀಯರು ಸೇರಿದಂತೆ 384 ಪ್ರವಾಸಿಗರು ನಾಪತ್ತೆಯಾಗಿದ್ದಾರೆ ಎಂದು ಗುರುತಿಸಲಾಗಿತ್ತು. ಬಳಿಕದ ಅಧಿಕೃತ ಮಾಹಿತಿಯಲ್ಲಿ ಕನಿಷ್ಠ 133 ಭಾರತೀಯರು ಹಾಗೂ 37 ಎನ್‌ಆರ್‌ಐಗಳು ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ತಿಳಿಸಲಾಗಿತ್ತು.

ಗುರುವಾರ ಬೆಳಗ್ಗೆ ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಅವರು ಸುಮಾರು 300 ಭಾರತೀಯರು ನಾಪತ್ತೆಯಾಗಿರುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ. ಸಂವಹನ ವ್ಯವಸ್ಥೆ ಹಾಗೂ ವಿದ್ಯುತ್ ಸಂಪರ್ಕ ಕಡಿತಗೊಂಡಿರುವುದು ಮತ್ತು ವಿವಿಧ ಸಂಸ್ಥೆಗಳು ಸಿದ್ಧಪಡಿಸಿರುವ ನಾಪತ್ತೆಯಾದವರ ಪಟ್ಟಿಗಳಲ್ಲಿನ ವ್ಯತ್ಯಾಸವೇ ಅಂಕಿಅಂಶಗಳಲ್ಲಿನ ಗೊಂದಲಕ್ಕೆ ಪ್ರಮುಖ ಕಾರಣ ಎನ್ನಲಾಗಿದೆ.

ನೇಪಾಳದಲ್ಲಿರುವ ಭಾರತದ ರಾಯಭಾರಿ ನವೀನ್ ಶ್ರೀವಾಸ್ತವ ಕೂಡ ಸಂಪರ್ಕ ವ್ಯವಸ್ಥೆ ಸ್ಥಗಿತಗೊಂಡಿರುವುದರಿಂದ ಅನೇಕ ಭಾರತೀಯರನ್ನು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದಾರೆ. ಹೀಗಾಗಿ ಪಟ್ಟಿಯಲ್ಲಿ ನಾಪತ್ತೆ ಎಂದು ದಾಖಲಾಗಿರುವ ಪ್ರತಿಯೊಬ್ಬರೂ ನಿಜವಾಗಿಯೂ ಕಾಣೆಯಾಗಿದ್ದಾರೆ ಎಂದು ಅರ್ಥೈಸಲು ಸಾಧ್ಯವಿಲ್ಲ. ಅವರ ನೈಜ ಸ್ಥಿತಿಗತಿ ಪತ್ತೆಹಚ್ಚುವ ಕಾರ್ಯ ಮುಂದುವರಿದಿದೆ.

ಕೈಲಾಸ ಮಾನಸ ಸರೋವರ ಯಾತ್ರಿಕರೂ ಸಂಕಷ್ಟದಲ್ಲಿ

ಪ್ರವಾಹದಿಂದಾಗಿ ಟಿಬೆಟ್‌ನ ಕೈಲಾಸ ಮಾನಸ ಸರೋವರ ಯಾತ್ರೆಯ ಮಾರ್ಗವೂ ತೀವ್ರವಾಗಿ ಹಾನಿಗೊಳಗಾಗಿದೆ. ನಾಪತ್ತೆಯಾದ ಭಾರತೀಯರಲ್ಲಿ ಕನಿಷ್ಠ 50 ಮಂದಿ ಕೈಲಾಸ ಮಾನಸ ಸರೋವರ ಯಾತ್ರೆಯಲ್ಲಿದ್ದವರು ಎಂದು ವರದಿಯಾಗಿದೆ.ಭಾರತೀಯ ಯಾತ್ರಿಕರು ಹಾಗೂ ಪ್ರವಾಸಿಗರ ಜತೆಗೆ ಅಮೆರಿಕ, ಆಸ್ಟ್ರೇಲಿಯಾ, ಬ್ರಿಟನ್, ಕೆನಡಾ, ಮಲೇಷ್ಯಾ, ನೆದರ್‌ಲ್ಯಾಂಡ್ಸ್ ಹಾಗೂ ದಕ್ಷಿಣ ಆಫ್ರಿಕಾ ಸೇರಿದಂತೆ ಹಲವು ದೇಶಗಳ ನಾಗರಿಕರೂ ಸಂಪರ್ಕಕ್ಕೆ ಸಿಗುತ್ತಿಲ್ಲ.

823 ಮಂದಿ ಸಂಪರ್ಕದಿಂದ ಹೊರಗೆ

ನೇಪಾಳದ ವಿಪತ್ತು ನಿರ್ವಹಣಾ ಸಂಸ್ಥೆಯ ಪ್ರಕಾರ, 823 ಮಂದಿ ಇನ್ನೂ ಸಂಪರ್ಕಕ್ಕೆ ಸಿಗುತ್ತಿಲ್ಲ. ಇವರಲ್ಲಿ ನೇಪಾಳಿ ಹಾಗೂ ವಿದೇಶಿ ನಾಗರಿಕರು ಮತ್ತು ಪ್ರವಾಸಿಗರು ಸೇರಿದ್ದಾರೆ. ಒಂದು ಹಂತದಲ್ಲಿ 579 ಪ್ರವಾಸಿಗರು ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದರು.

ಶಾಲಾ ಹಂತದಲ್ಲೇ ಹರ್ಬಲ್ ಹೇರ್ ಆಯಿಲ್ ಬಿಸ್ನೆಸ್ ಆರಂಭಿಸಿ, ಯಶಸ್ವಿಯಾದ ಬಾಲಕಿಯರು: ಅಮ್ಮನ ಮನೆಮದ್ದೇ ಪ್ರೇರಣೆ

ಯಮುನಾನಗರ(ಹರಿಯಾಣ):

ಒಬ್ಬ ತಾಯಿ ಮನೆಮದ್ದು ನಾಲ್ವರು ಸರ್ಕಾರಿ ಶಾಲಾ ವಿದ್ಯಾರ್ಥಿನಿಯರನ್ನು ಯುವ ಉದ್ಯಮಿಗಳನ್ನಾಗಿ ಬೆಳೆಸುತ್ತಿದೆ. 15 ರಿಂದ 17 ವರ್ಷ ವಯಸ್ಸಿನ ರೇಣುಕಾ, ಸಿಯಾ, ನ್ಯಾನ್ಸಿ ಮತ್ತು ದಿವ್ಯಾ ಎಂಬ ಬಾಲಕಿಯರು ತಮ್ಮ ಸ್ಟಾರ್ಟ್‌ಅಪ್ 'ಹಾರ್ವೋಲ್' ಅಡಿಯಲ್ಲಿ ಗಿಡಮೂಲಿಕೆಗಳನ್ನು ಬಳಸಿ ಕೂದಲ ರಕ್ಷಣೆಯ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ. ಮೊದಲು ತಮ್ಮ ಮನೆ ಸಮೀಪದ ಹಳ್ಳಿಗಳು ಮತ್ತು ಸ್ಥಳೀಯ ಅಂಗಡಿಗಳಲ್ಲಿ ಮಾರಾಟವಾದ ಇವರ ಉತ್ಪನ್ನಗಳಿಗೆ ಈಗ ಆಸ್ಟ್ರೇಲಿಯಾದವರೆಗೂ ಗ್ರಾಹಕರಿದ್ದಾರೆ.

ಇದು ಹರಿಯಾಣದ ಲಹರ್‌ಪುರದಲ್ಲಿರುವ ಸರ್ಕಾರಿ ಶಾಲೆಯ ವಿದ್ಯಾರ್ಥಿನಿಯರ ಸಾಧನೆ. ಈ ನಾಲ್ವರೂ ತಮ್ಮ ಅಧ್ಯಯನದ ಜತೆ ಜತೆಗೆ ಈ ಉದ್ಯಮವನ್ನೂ ನಿರ್ವಹಿಸುತ್ತಿದ್ದಾರೆ. ಈ ಹೆಣ್ಣು ಮಕ್ಕಳ ಪ್ರಯಾಣ 2025ರ ನವೆಂಬರ್ ನಲ್ಲಿ ಶಿಕ್ಷಕ ಕನ್ವಲ್ಜಿತ್ ಅವರು ಇವರನ್ನು ಕುಶಾಲ್ ಬಿಸ್ನೆಸ್ ಚಾಲೆಂಜ್ ಅಥವಾ ಕೆಬಿಸಿಗೆ ಪರಿಚಯಿಸಿದಾಗ ಶುರುವಾಗಿದೆ. ಸರ್ಕಾರಿ ಶಾಲಾ ವಿದ್ಯಾರ್ಥಿಗಳಲ್ಲಿ ಪ್ರಾಯೋಗಿಕ ವ್ಯವಹಾರದ ಕಲ್ಪನೆಗಳನ್ನು ಅಭಿವೃದ್ಧಿಪಡಿಸಲು ಕೆಬಿಸಿ ಪ್ರೋತ್ಸಾಹಿಸುತ್ತದೆ.

ಸಂಭಾವ್ಯ ಉತ್ಪನ್ನಗಳ ಕುರಿತು ಚರ್ಚೆಯ ಸಂದರ್ಭದಲ್ಲಿ ಸಿಯಾ ತನ್ನ ತಾಯಿ ರೀನಾ ದೇವಿ ಅವರು ಮನೆಯಲ್ಲಿ ತಯಾರಿಸುತ್ತಿರುವ ಗಿಡಮೂಲಿಕೆಗಳ ಎಣ್ಣೆಯ ಬಗ್ಗೆ ಮಾತನಾಡಿದ್ದಾರೆ. ಇದು ಶಿಕ್ಷಕರ ಗಮನ ಸೆಳೆದಿದೆ. ಈ ಗಿಡಮೂಲಿಕೆಗಳ ಎಣ್ಣೆಯಲ್ಲಿರುವ ವ್ಯಾಪಾರ ಸಾಮರ್ಥ್ಯವನ್ನು ಅವರು ತಕ್ಷಣ ಕಂಡುಕೊಂಡಿದ್ದಾರೆ. ಮತ್ತು ಅದನ್ನು ಮಾರುಕಟ್ಟೆ ಉತ್ಪನ್ನವಾಗಿ ಪರಿವರ್ತಿಸಲು ವಿದ್ಯಾರ್ಥಿನಿಯರನ್ನು ಪ್ರೋತ್ಸಾಹಿಸಿದ್ದಾರೆ.

ಮಕ್ಕಳ ಕೂದಲುಗಳು ಅಕಾಲಿಕವಾಗಿ ಬೂದುಬಣ್ಣಕ್ಕೆ ತಿರುಗುತ್ತಿವೆ. ಹೀಗಾಗಿ ಕೂದಲಿನ ನೈಸರ್ಗಿಕ ಆರೈಕೆಗೆ ಗಿಡಮೂಲಿಕೆಗಳ ಎಣ್ಣೆಯನ್ನು ತಯಾರಿಸುವುದು ಮುಖ್ಯ ಎಂದು ನಮಗೆ ತೋಚಿತು ಎಂದು ವಿದ್ಯಾರ್ಥಿನಿ ಸಿಯಾ ಹೇಳಿದರು. ಗ್ರಾಹಕರು ಉತ್ಪನ್ನಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ನಂತರ, ವಿದ್ಯಾರ್ಥಿನಿಯರು ತಮ್ಮ ಉತ್ಪನ್ನಗಳ ಪಟ್ಟಿಗೆ ಹರ್ಬಲ್ ಶಾಂಪೂ ಮತ್ತು ಹೇರ್ ಸೀರಮ್ ಸೇರಿಸಿಕೊಂಡಿದ್ದಾರೆ. ಈಗ ಹರ್ಬಲ್ ಹೆನ್ನಾವನ್ನೂ ಪ್ರಾರಂಭಿಸುವ ತಯಾರಿಯಲ್ಲಿದ್ದಾರೆ.

ಈ ಕಲ್ಪನೆಯು ಕುಶಾಲ್ ಬಿಸ್ನೆಸ್ ಚಾಲೆಂಜ್‌ನಲ್ಲಿ ವಿದ್ಯಾರ್ಥಿನಿಯರಿಗೆ ವಿಶೇಷ ಮನ್ನಣೆ ತಂದುಕೊಟ್ಟಿತು. ಹಾರ್ವೋಲ್ ಸ್ಟಾರ್ಟ್ ಅಪ್ ಗೆ ಶಾಲಾ, ಬ್ಲಾಕ್ ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಸಿಕ್ಕಿದೆ. ನಂತರ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಮೊದಲ 10 ತಂಡಗಳಲ್ಲಿ ಸ್ಥಾನ ಪಡೆದಿದೆ. ಈ ತಂಡವು ಒಟ್ಟು 1 ಲಕ್ಷ ರೂಪಾಯಿ ಬಹು ಮಾನದ ಹಣವನ್ನೂ ಪಡೆದಿದೆ.

ನಾವು ಜಿಲ್ಲಾ ಮಟ್ಟದಲ್ಲಿ 25,000 ರೂಪಾಯಿ ಮತ್ತು ರಾಜ್ಯ ಮಟ್ಟದಲ್ಲಿ 75,000 ರೂಪಾಯಿ ಬಹುಮಾನ ಪಡೆದೆವು ಎಂದು ವಿದ್ಯಾರ್ಥಿನಿ ರೇಣುಕಾ ಹೇಳಿದರು. ಬಹುಮಾನದ ಹಣವನ್ನು ನಮ್ಮಲ್ಲಿ ವಿಭಜಿಸುವ ಅಥವಾ ಖರ್ಚು ಮಾಡುವ ಬದಲು ಅದನ್ನು ಹೊಸ ವ್ಯವಹಾರದಲ್ಲಿ ಹೂಡಿಕೆ ಮಾಡಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ಇತ್ತ ಮೌಢ್ಯ ಬಿತ್ತನೆ, ಅತ್ತ ಮೋಡ ಬಿತ್ತನೆ- ಇದು ಎಡಬಿಡಂಗಿ ಸರ್ಕಾರ

ಮೋಡ ಬಿತ್ತನೆ ದುಬಾರಿ ಸರ್ಕಾರಿ ಯೋಜನೆಯಾಗಬಹುದು. ಪೂಜೆ-ಪುನಸ್ಕಾರ ಜನಮಾನಸದಲ್ಲಿ ಸರ್ಕಾರಿ ಪ್ರಾಯೋಜಿತ ಮೌಢ್ಯ ಬಿತ್ತನೆಗೆ ಕಾರಣವಾಗಬಹುದು. ಮಳೆ ಬರಬಹುದು, ಬರದಿರಬಹುದು; ಸಾರ್ವಜನಿಕ ಹಣ ಮತ್ತು ನಂಬಿಕೆಯಂತೂ ಮಣ್ಣುಗೂಡುತ್ತವೆ. ಮೊದಲು ನೆಲದ ನೀತಿ ಬದಲಾಗಬೇಕು. ಮೋಡ ಮತ್ತು ಮೌಢ್ಯ ಬಿತ್ತುವ ಮೊದಲು ನೀರನ್ನು ಉಳಿಸುವ ಸಂಸ್ಕೃತಿಯನ್ನು ಬಿತ್ತಬೇಕು.



ಮಳೆ ಕೈಕೊಟ್ಟಾಗ ರೈತನ ಕಣ್ಣು ಆಕಾಶದತ್ತ ನೆಟ್ಟಿರುತ್ತದೆ. ಬರದ ಬಿಸಿ ಏರತೊಡಗಿದೊಡನೆ ಸರ್ಕಾರವೂ ಆಕಾಶದತ್ತ ನೋಡತೊಡಗುತ್ತದೆ. ಸದ್ಯ ರಾಜ್ಯದಲ್ಲಿ ಉಂಟಾಗಿರುವ ತೀವ್ರ ಮಳೆ ಕೊರತೆಯ ಹಿನ್ನೆಲೆಯಲ್ಲಿ 101 ತಾಲೂಕುಗಳನ್ನು ಅಧಿಕೃತವಾಗಿ ಬರಪೀಡಿತ ಎಂದು ಸರ್ಕಾರ ಘೋಷಿಸಿದೆ.

ಈಗಾಗಲೇ ಬರ ಬಾಧಿತ ತಾಲ್ಲೂಕುಗಳಿಂದ ಗ್ರೌಂಡ್ ಟ್ರೂಥಿಂಗ್ ವರದಿಯನ್ನು ಪಡೆಯಲಾಗಿದ್ದು, ಬರ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರ ಸಂಪೂರ್ಣ ಸನ್ನದ್ಧವಾಗಿದೆ, ಕೇಂದ್ರ ಸರ್ಕಾರದ ಮಾನದಂಡಗಳ ಅನ್ವಯ ಅಂತಿಮ ವರದಿಯನ್ನು ಸಿದ್ಧಪಡಿಸುತ್ತಿದೆ ಎಂದಿದ್ದಾರೆ ಕಂದಾಯ ಸಚಿವ ಡಾ. ಜಿ. ಪರಮೇಶ್ವರ್. ಅಲ್ಲದೆ ಬರ ಕುರಿತು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು ಎಂದಿದ್ದಾರೆ. ಆದರೆ, ಬರ ಪರಿಸ್ಥಿತಿ ಕುರಿತು ಚರ್ಚಿಸಲು ಸಿಕ್ಕ ಸದನವೆಂಬ ಅಪೂರ್ವ ಅವಕಾಶವನ್ನು ಆಳುವ-ಕೇಳುವ ಪಕ್ಷಗಳೆರಡೂ ಪೈಪೋಟಿಗೆ ಬಿದ್ದು ಹಾಳು ಮಾಡಿವೆ. ಸಾಲದು ಎಂದು, ಮಾಧ್ಯಮಗಳ ಮುಂದೆ ನಿಂತು ಬರ-ಬೆಳೆ-ರೈತರ ಕುರಿತು ಮೊಸಳೆ ಕಣ್ಣೀರು ಸುರಿಸುತ್ತಿವೆ.

ಇದರ ನಡುವೆಯೇ ರಾಜ್ಯ ಸರ್ಕಾರ ಮೋಡ ಬಿತ್ತನೆ ಕಾರ್ಯಕ್ಕೆ ಕೈಹಾಕಿದೆ. ಸೆಪ್ಟೆಂಬರ್ ನಿಂದ ಸುಮಾರು 60 ದಿನಗಳ ಕಾಲ, 4 ಕಂದಾಯ ವಿಭಾಗಗಳಲ್ಲಿ ಮೋಡ ಬಿತ್ತನೆ ಮಾಡುತ್ತಿದ್ದೇವೆ. ಎಲ್ಲಿ ಕ್ಲೌಡ್ ಇರುತ್ತೋ ಅಲ್ಲಿ ಮೋಡ ಬಿತ್ತನೆ ಮಾಡುತ್ತೇವೆ. ಸಕ್ಸಸ್ ರೇಟ್ ಕಡಿಮೆ ಇದೆ. ಆದರೂ ರೈತರ ಒತ್ತಡ ಇದೆ. ಬರ ಇದೆ. ಮೋಡ ಬಿತ್ತನೆ ಮಾಡಿದ್ರೆ, ಅನುಕೂಲ ಆಗಬಹುದು ಅಂತ ಮಾಡುತ್ತಿದ್ದೇವೆ. ಅದಕ್ಕಾಗಿ 27 ಕೋಟಿ ಖರ್ಚಾಗಲಿದೆ ಎಂದು ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದ್ದಾರೆ.

ವಿಪರ್ಯಾಸವೆಂದರೆ, ಕಳೆದ ಜೂನ್, ಜುಲೈ, ಆಗಸ್ಟ್ ಮೊದಲ ವಾರದಲ್ಲಿ ಮೋಡ ಬಿತ್ತನೆ ಮಾಡುವಂತೆ, ಒಂದಲ್ಲ ಎರಡಲ್ಲ, ಹತ್ತಾರು ಬಾರಿ ಉತ್ತರ ಕರ್ನಾಟಕ ಭಾಗದ ಹಲವಾರು ರೈತರು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರು. ಆದರೆ ಆ ಮುಂಗಾರಿನ ಹಂಗಾಮಿನಲ್ಲಿ ಕಾಂಗ್ರೆಸ್ ಸರ್ಕಾರ, ಮುಖ್ಯಮಂತ್ರಿ ಬದಲಾವಣೆ, ಸಚಿವರ ಆಯ್ಕೆ, ಖಾತೆ ಹಂಚಿಕೆಯ ರಾಜಕಾರಣದಲ್ಲಿ ಮುಳುಗಿತ್ತು. ರೈತರ ಮನವಿಯನ್ನು ಮೂಲೆಗೆಸೆದಿತ್ತು. ಈಗ, ಬರ ಪರಿಸ್ಥಿತಿ ಬಿಗಡಾಯಿಸಿರುವಾಗ ಮೋಡ ಬಿತ್ತನೆಯ ಮಂತ್ರ ಜಪಿಸುತ್ತಿದೆ.

ಮೋಡ ಬಿತ್ತನೆ ಎಂದರೆ ವಿಜ್ಞಾನದ ನೆರವಿನಿಂದ ಮೋಡಗಳಿಗೆ ಸೂಕ್ತವಾದ ಸೂಕ್ಷ್ಮ ಕಣಗಳನ್ನು ಸೇರಿಸಿ, ಪ್ರಚೋದಿಸಿ ಮಳೆ ಸುರಿಸುವ ಕೃತಕ ಪ್ರಯತ್ನ. ಆಕಾಶದಲ್ಲಿ ಈಗಾಗಲೇ ಇರುವ ಮೋಡಗಳ ಮೇಲೆ ಬೆಳ್ಳಿ ಅಯೋಡೈಡ್, ಉಪ್ಪಿನ ಕಣಗಳು ಮತ್ತು ಒಣ ಮಂಜು ಹರಡಿ, ನೀರಿನ ಹನಿಗಳ ರಚನೆಗೆ ಉತ್ತೇಜಿಸಲಾಗುತ್ತದೆ. ಇದಕ್ಕೆ ಮುಖ್ಯವಾಗಿ ವಿಮಾನ ಅಥವಾ ಡ್ರೋನ್‌ಗಳನ್ನು ಬಳಸಲಾಗುತ್ತದೆ. ಮೋಡ ಬಿತ್ತನೆಗೆ ಮೋಡ ಮುಖ್ಯ. ಅದೇ ಇಲ್ಲದಿದ್ದರೆ ಮಳೆ ಸುರಿಸಲು ಸಾಧ್ಯವಿಲ್ಲ.

ಆದರೆ, ಮೋಡ ಬಿತ್ತನೆಯ ಪರವಾದ ವಾದಗಳು- ಮಳೆ ಕೊರತೆಯಿರುವ ಪ್ರದೇಶಗಳಲ್ಲಿ ಸೂಕ್ತ ವಾತಾವರಣ ಸಿಕ್ಕರೆ ಮಳೆಯ ಪ್ರಮಾಣವನ್ನು ಹೆಚ್ಚಿಸಬಹುದು. ಕೃಷಿ, ಕುಡಿಯುವ ನೀರು, ಜಲಾಶಯಗಳ ತುಂಬುವಿಕೆಗೆ ತಾತ್ಕಾಲಿಕವಾಗಿ ನೆರವಾಗಬಹುದು. ಬರ ಪರಿಸ್ಥಿತಿ ತೀವ್ರವಾಗಿರುವಾಗ ಲಭ್ಯವಿರುವ ವೈಜ್ಞಾನಿಕ ಆಯ್ಕೆಗಳಲ್ಲಿ ಇದೂ ಒಂದು, ಪ್ರಯೋಗಕ್ಕೊಡ್ಡಬಹುದು ಎಂಬುದನ್ನು ಮುನ್ನಲೆಗೆ ತರುತ್ತವೆ. ಅದನ್ನು ಮೋಡ ಬಿತ್ತನೆ ಗುತ್ತಿಗೆ ಪಡೆಯುವ ಖಾಸಗಿ ಕಂಪನಿಗಳು- ಹೆಚ್ಚಿನವು ರಾಜಕಾರಣಿಗಳ ಒಡೆತನದಲ್ಲಿರುವ ಕಂಪನಿಗಳು- ವ್ಯವಸ್ಥಿತವಾಗಿ ತೇಲಿಬಿಡುತ್ತವೆ.

ರಾಜ್ಯದಲ್ಲಿ ಮೋಡ ಬಿತ್ತನೆ ಹೊಸದಲ್ಲ. 2003ರಲ್ಲಿ, ಎಸ್.ಎಂ. ಕೃಷ್ಣ ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿಯೇ ಮೋಡ ಬಿತ್ತನೆಗಾಗಿ 9.37 ಕೋಟಿ ವ್ಯಯಿಸಲಾಗಿತ್ತು. 2004ರಲ್ಲಿ 10ರಿಂದ 15 ಕೋಟಿ, 2012ರಲ್ಲಿ 4.80 ಕೋಟಿ, 2017ರಲ್ಲಿ 30 ಕೋಟಿ, 2019ರಲ್ಲಿ 93 ಕೋಟಿ ಹೀಗೆ ಸರ್ಕಾರದ ಅಧಿಕೃತ ಲೆಕ್ಕದ ಪ್ರಕಾರವೇ ಸುಮಾರು 150 ಕೋಟಿ ರೂಪಾಯಿಗಳನ್ನು ಈ ಮೋಡ ಬಿತ್ತನೆಗಾಗಿ ವಿನಿಯೋಗಿಸಲಾಗಿದೆ.

ಇದಕ್ಕೆ ಸಮರ್ಥನೆಯಾಗಿ ಸರ್ಕಾರ, ವಿಮಾನಗಳು, ರಾಸಾಯನಿಕಗಳು, ಹವಾಮಾನ ರಾಡಾರ್‌ಗಳು, ತಜ್ಞರ ತಂಡ, ನಿರಂತರ ಮೇಲ್ವಿಚಾರಣೆಗಳು ದುಬಾರಿ ಎಂಬ ಸಮಜಾಯಿಷಿ ನೀಡಬಹುದು. ಇಷ್ಟಾದರೂ, ಮೋಡ ಬಿತ್ತನೆ ಕಾರ್ಯಾಚರಣೆ ಯಶಸ್ವಿಯಾಗುತ್ತದೆ ಎನ್ನುವುದಕ್ಕೆ ಯಾವುದೇ ಖಾತರಿ ಇಲ್ಲ. ಮಳೆ ಬಂದರೆ ಅದು ಮೋಡ ಬಿತ್ತನೆಯಿಂದಾಗಿ ಅಥವಾ ಸ್ವಾಭಾವಿಕವಾಗಿ ಎಂಬುದನ್ನು ನಿರ್ಧರಿಸುವುದೂ ಸುಲಭವಲ್ಲ.

ಬರಪೀಡಿತ ಪ್ರದೇಶಗಳಲ್ಲಿ ಸರ್ಕಾರ ಕೋಟ್ಯಂತರ ರೂಪಾಯಿ ಖರ್ಚು ಮಾಡಿದರೂ ನಿರೀಕ್ಷಿತ ಮಳೆ ಬೀಳದಿದ್ದರೆ ಸಾರ್ವಜನಿಕ ಹಣದ ಬಳಕೆಯ ಬಗ್ಗೆ ಪ್ರಶ್ನೆಗಳು ಏಳುವುದು ಸಹಜ. ಹೀಗಾಗಿ ಮಳೆ ಬಂತು ಎನ್ನುವುದಕ್ಕಿಂತ ಖರ್ಚು ಮಾಡಿದ ಪ್ರತಿಯೊಂದು ರೂಪಾಯಿಗೆ ಎಷ್ಟು ಹೆಚ್ಚುವರಿ ನೀರು ದೊರೆಯಿತು; ಪರಿಸರದ ಮೇಲಾಗುವ ಪರಿಣಾಮವೇನು, ಪ್ರಯೋಗ ಯಶಸ್ವಿಯಾಯಿತೇ ಎಂಬ ಪ್ರಶ್ನೆಗಳಿಗೆ ಸರ್ಕಾರ ಉತ್ತರಿಸಬೇಕಾಗುತ್ತದೆ.

ಮಳೆಯನ್ನೇ ಉತ್ಪಾದಿಸುವ ಶಕ್ತಿ ಮನುಷ್ಯನ ಕೈಗೆ ಬಂದಿದೆ ಎಂಬ ಭ್ರಮೆ ಮಾತ್ರ ಅಪಾಯಕಾರಿ. ಪ್ರಕೃತಿಯ ಸಂಕೀರ್ಣತೆಯನ್ನು ಸಂಪೂರ್ಣವಾಗಿ ನಿಯಂತ್ರಿಸುವ ಹಂತಕ್ಕೆ ವಿಜ್ಞಾನ ಇನ್ನೂ ಬಂದಿಲ್ಲ. ಆದರೂ ವೈಜ್ಞಾನಿಕ ಕ್ರಮಕ್ಕೆ ಮುಂದಾಗುವ ಸರ್ಕಾರ, ಅದಕ್ಕೆ ವ್ಯತಿರಿಕ್ತವಾಗಿ, ಉತ್ತಮ ಮಳೆಯಾಗಲೆಂದು ಮಡಿಕೇರಿ ತಾಲ್ಲೂಕಿನ ಐತಿಹಾಸಿಕ ಹಾಗೂ ಪ್ರಸಿದ್ಧ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ವಿಶೇಷ ಪೂಜೆಯನ್ನೂ ಆಯೋಜಿಸುತ್ತದೆ. ಈ ವಿಶೇಷ ಪೂಜೆಯಲ್ಲಿ ಕೃಷಿ ಸಚಿವ ನರೇಂದ್ರಸ್ವಾಮಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎ.ಎಸ್. ಪೊನ್ನಣ್ಣ, ಶಾಸಕರು, ಅಧಿಕಾರಿಗಳು ಪಾಲ್ಗೊಳ್ಳುವ ಮೂಲಕ ಸರ್ಕಾರವೇ ಮೌಢ್ಯ ಬಿತ್ತನೆಯನ್ನೂ ಮಾಡುತ್ತದೆ.

ಮೋಡ ಬಿತ್ತನೆ ಮತ್ತು ಮೌಢ್ಯ ಬಿತ್ತನೆಯ ಬದಲಿಗೆ ಸರ್ಕಾರ, ಅದೇ ಸಮಯದಲ್ಲಿ ಕೆರೆಗಳಿಗೆ ನೀರು ಹರಿಸುವ ಕಾಲುವೆಗಳನ್ನು ಸ್ವಚ್ಛಗೊಳಿಸುತ್ತಿದೆಯೇ, ಮಳೆನೀರಿನ ಸಂಗ್ರಹವನ್ನು ಹೆಚ್ಚಿಸುತ್ತಿದೆಯೇ, ಅಂತರ್ಜಲವನ್ನು ರಕ್ಷಿಸುತ್ತಿದೆಯೇ, ಬೆಳೆ ಪದ್ಧತಿಯನ್ನು ಬದಲಾಯಿಸುತ್ತಿದೆಯೇ, ಆ ಬಗ್ಗೆ ರೈತರಿಗೆ ತಿಳುವಳಿಕೆ ತುಂಬುತ್ತಿದೆಯೇ ಎಂಬುದನ್ನೂ ಜನರು ಕೇಳಬೇಕು.

ಇಲ್ಲದಿದ್ದರೆ ಮೋಡ ಬಿತ್ತನೆಯೂ ಮತ್ತೊಂದು ದುಬಾರಿ ಸರ್ಕಾರಿ ಯೋಜನೆಯಾಗಬಹುದು. ಪೂಜೆ-ಪುನಸ್ಕಾರವೂ ಜನಮಾನಸದಲ್ಲಿ ಸರ್ಕಾರಿ ಪ್ರಾಯೋಜಿತ ಮೌಢ್ಯ ಬಿತ್ತನೆಗೆ ಕಾರಣವಾಗಬಹುದು. ಮಳೆ ಬರಬಹುದು, ಬರದಿರಬಹುದು; ಸಾರ್ವಜನಿಕ ಹಣ ಮತ್ತು ನಂಬಿಕೆಯಂತೂ ಮಣ್ಣುಗೂಡುತ್ತವೆ. ಪ್ರಕೃತಿಯನ್ನು ಬಲವಂತವಾಗಿ ಬದಲಿಸುವ-ಒಲಿಸಿಕೊಳ್ಳುವ ಪ್ರಯತ್ನಕ್ಕಿಂತ ಮೊದಲು ನೆಲದ ನೀತಿ ಬದಲಾಗಬೇಕು. ಮೋಡ ಮತ್ತು ಮೌಢ್ಯ ಬಿತ್ತುವ ಮೊದಲು ನೀರನ್ನು ಉಳಿಸುವ ಸಂಸ್ಕೃತಿಯನ್ನು ಬಿತ್ತಬೇಕು.

ನಾಗೇಂದ್ರ ಪ್ರಕರಣ ಬಿಜೆಪಿ-ಕಾಂಗ್ರೆಸ್ ರಾಜಕೀಯ ಲೆಕ್ಕಾಚಾರವೇನು?

ಒಂದೇ ಏಟಿಗೆ ಎರಡು ಹಕ್ಕಿ ಹೊಡೆವುದೇ ಕಾಂಗ್ರೆಸ್?

ಕರ್ನಾಟಕದ ರಾಜಕಾರಣದಲ್ಲಿ ಮತ್ತೊಮ್ಮೆ ಬಳ್ಳಾರಿ ಜಿಲ್ಲೆ ಪ್ರಮುಖ ರಾಜಕೀಯ ಚಟುವಟಿಕೆಗಳ ಕೇಂದ್ರಬಿಂದುವಾಗಿ ಕಾಣಿಸಿಕೊಂಡಿದೆ. ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಣ ದುರುಪಯೋಗ ಪ್ರಕರಣದಲ್ಲಿ ಸಚಿವ ಬಿ. ನಾಗೇಂದ್ರ ಅವರ ವಿರುದ್ಧ ಪ್ರತಿಪಕ್ಷ ಬಿಜೆಪಿ ಆರಂಭಿಸಿರುವ ಹೋರಾಟವು ಕೇವಲ ಭ್ರಷ್ಟಾಚಾರದ ಆರೋಪ ಅಥವಾ ಒಬ್ಬ ಸಚಿವರ ರಾಜೀನಾಮೆಗೆ ಮಾತ್ರವೇ ಸೀಮಿತವಾಗಿ ಉಳಿದಿಲ್ಲ. ಈ ಬೆಳವಣಿಗೆಯ ಹಿಂದೆ ರಾಜ್ಯ ರಾಜಕಾರಣದ ಅಧಿಕಾರ ಸಮೀಕರಣ, ವಾಲ್ಮೀಕಿ ಸಮುದಾಯದ ನಾಯಕತ್ವ ಹಾಗೂ ಕಾಂಗ್ರೆಸ್ ಪಕ್ಷದ ಆಂತರಿಕ ಬಣಗಳ ಲೆಕ್ಕಾಚಾರಗಳು ಸೇರಿಕೊಂಡಿವೆ.

2024ರಲ್ಲಿ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಸುಮಾರು 89 ಕೋಟಿ ರೂ. ಹಣ ಅಕ್ರಮವಾಗಿ ವರ್ಗಾವಣೆಯಾಗಿರುವುದು ಬೆಳಕಿಗೆ ಬಂದಿತ್ತು. ಆ ತಕ್ಷಣವೇ ಬಿ. ನಾಗೇಂದ್ರ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ತನಿಖೆ ಮುಂದುವರಿದು 2026ರ ಜೂನ್ ತಿಂಗಳಿನಲ್ಲಿ ಸಿಬಿಐ ನ್ಯಾಯಾಲಯಕ್ಕೆ ಸಲ್ಲಿಸಿದ ದೋಷಾರೋಪ ಪಟ್ಟಿಯಲ್ಲಿ ಬಿ. ನಾಗೇಂದ್ರ ಸೇರಿದಂತೆ ಒಟ್ಟು 30 ಮಂದಿಯನ್ನು ಆರೋಪಿಗಳನ್ನಾಗಿ ಹೆಸರಿಸಿತು. ನಕಲಿ ಚೆಕ್‌ಗಳು ಮತ್ತು ಆರ್‌ಟಿಜಿಎಸ್ ವ್ಯವಹಾರಗಳ ಮೂಲಕ 89.63 ಕೋಟಿ ರೂ. ಹಣವನ್ನು ಸುಮಾರು 600 ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿ, ನಂತರ ಅದನ್ನು ನಗದು, ಚಿನ್ನ ಹಾಗೂ ವಾಹನಗಳ ರೂಪಕ್ಕೆ ಪರಿವರ್ತಿಸಲಾಗಿದೆ ಎಂಬ ಗಂಭೀರ ಅಂಶಗಳನ್ನು ತನಿಖಾ ಸಂಸ್ಥೆ ಉಲ್ಲೇಖಿಸಿತ್ತು. ಅಲ್ಲದೆ, ನಾಗೇಂದ್ರ ಅವರ ಸಂಬಂಧಿಕರು ಮತ್ತು ಆಪ್ತರ ಖಾತೆಗಳಿಗೂ ಈ ಹಣ ಹರಿದಿದೆ ಎಂದು ಸಿಬಿಐ ಉಲ್ಲೇಖಿಸಿತ್ತು. ಇವೆಲ್ಲವೂ ನ್ಯಾಯಾಲಯದ ವಿಚಾರಣೆಯ ಹಂತದಲ್ಲಿದ್ದು ಸಾಬೀತಾಗಬೇಕಾದ ಆರೋಪಗಳಾಗಿದ್ದರೂ, ರಾಜಕೀಯವಾಗಿ ಭಾರಿ ಸಂಚಲನ ಮೂಡಿಸಿವೆ.

ತನಿಖೆ ನಡೆಯುತ್ತಿರುವಾಗಲೇ, 2026ರ ಆಗಸ್ಟ್ 3ರಂದು ನಡೆದ ಸಚಿವ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ನಾಗೇಂದ್ರ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ. ಯೋಜನೆ ಮತ್ತು ಸಾಂಖ್ಯಿಕ ಖಾತೆಯನ್ನು ನೀಡಲಾಗಿದೆ. ನಾಗೇಂದ್ರ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡಿರುವ ತಮ್ಮ ಪಕ್ಷದ ಕ್ರಮವನ್ನು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸಮರ್ಥಿಸಿಕೊಂಡಿದ್ದಾರೆ. ''ತನಿಖೆಯ ಅಧಿಕೃತ ವರದಿಯಲ್ಲಿ ನಾಗೇಂದ್ರ ಅವರ ಪಾತ್ರವಿಲ್ಲ ಎಂಬುದು ಸ್ಪಷ್ಟವಾದ ನಂತರವೇ ಅವರನ್ನು ಮತ್ತೆ ಸಂಪುಟಕ್ಕೆ ತೆಗೆದುಕೊಳ್ಳಲಾಗಿದೆ. ಅಲ್ಲದೆ, ಹಗರಣಕ್ಕೆ ಸಂಬಂಧಿಸಿದಂತೆ ಅಕ್ರಮಕ್ಕೆ ಒಳಗಾಗಿದ್ದ ಹಣದಲ್ಲು 95% ರಷ್ಟನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಈ ಹಗರಣದಲ್ಲಿ ನಾಗೇಂದ್ರ ಅವರ ಪಾತ್ರವಿಲ್ಲ ಎಂಬುದು ಸ್ಪಷ್ಟವಾಗಿದೆ'' ಎಂದು ಹೇಳಿದ್ದಾರೆ.

ಆದಾಗ್ಯೂ, ನಾಗೇಂದ್ರ ಅವರಿಗೆ ಮಂತ್ರಿಗಿರಿ ಕೊಟ್ಟಿರುವುದನ್ನು ವಿಪಕ್ಷ ಬಿಜೆಪಿಗೆ ಪ್ರಬಲ ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳುತ್ತಿದೆ. ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿದ್ದ ಹಣ ದುರುಪಯೋಗ ಪ್ರಕರಣದಲ್ಲಿ ಮುಖ್ಯ ಆರೋಪಿಯಾಗಿರುವ ವ್ಯಕ್ತಿಗೆ ಮತ್ತೆ ಮಂತ್ರಿಗಿರಿ ನೀಡಿದ್ದನ್ನು ಬಿಜೆಪಿ ಕಟುವಾಗಿ ಪ್ರಶ್ನಿಸತೊಡಗಿದೆ.

ವಿಧಾನಮಂಡಲದ ಮುಂಗಾರು ಅಧಿವೇಶನದಲ್ಲೂ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ನಾಗೇಂದ್ರ ಅವರ ರಾಜೀನಾಮೆಗೆ ಪಟ್ಟು ಹಿಡಿದು ನಿರಂತರ ಪ್ರತಿಭಟನೆಗಳನ್ನು ನಡೆಸಿದರು. ಪರಿಣಾಮ ಕಲಾಪಗಳಿಗೆ ತೀವ್ರ ಅಡ್ಡಿಯಾಗಿ, ನಿಗದಿತ ಸಮಯಕ್ಕಿಂತ ಮೂರು ದಿನ ಮುಂಚಿತವಾಗಿಯೇ ಅಧಿವೇಶನ ಕೊನೆಗೊಂಡಿತು. ಅಧಿವೇಶನ ಮುಗಿಯುತ್ತಿದ್ದಂತೆಯೇ ಬಿಜೆಪಿ, ಸೆಪ್ಟೆಂಬರ್ 1ರಿಂದ ರಾಯಚೂರಿನಿಂದ ಬಳ್ಳಾರಿಯವರೆಗೆ ಸುಮಾರು 170 ಕಿಲೋಮೀಟರ್‌ಗಳ ಬೃಹತ್ ಪಾದಯಾತ್ರೆಗೆ ಯೋಜನೆ ರೂಪಿಸಿದೆ. ಕೇಂದ್ರ ಸಚಿವರು ಮತ್ತು ಬಿಜೆಪಿ-ಜೆಡಿಎಸ್ ಮುಖಂಡರು ಭಾಗವಹಿಸಲಿರುವ ಈ ಪಾದಯಾತ್ರೆಯ ಅಂತಿಮ ಗುರಿ ಬಳ್ಳಾರಿ.

ಬಳ್ಳಾರಿಯು ದಶಕಗಳಿಂದಲೂ ಗಣಿಗಾರಿಕೆ, ಹಣಬಲ, ಜಾತಿ ಸಮೀಕರಣ ಹಾಗೂ ರಾಜ್ಯಮಟ್ಟದ ನಾಯಕತ್ವವನ್ನು ರೂಪಿಸುವ ರಾಜಕೀಯ ಪ್ರಯೋಗಶಾಲೆ ಗುರುತಿಸಿಕೊಂಡಿದೆ. ಹಿಂದೆ ಗಾಲಿ



ಜನಾರ್ದನ ರೆಡ್ಡಿ ಮತ್ತು ಬಿ ಶ್ರೀರಾಮುಲು ಅವರ ಮೂಲಕ ಬಿಜೆಪಿ ಇಲ್ಲಿ ಗಟ್ಟಿ ನೆಲೆ ಹೊಂದಿತ್ತು. ಆದರೆ, ನಂತರದ ದಿನಗಳಲ್ಲಿ ಕಾಂಗ್ರೆಸ್ ತನ್ನ ಪ್ರಭಾವವನ್ನು ಮರುಸ್ಥಾಪಿಸಿತು. ಈ ಬೆಳವಣಿಗೆಯಲ್ಲಿ ವಾಲ್ಮೀಕಿ-ನಾಯಕ ಸಮುದಾಯದ ಮುಖಗಳಾಗಿ ಬಿ. ನಾಗೇಂದ್ರ ಮತ್ತು ಇ. ತುಕಾರಾಂ ಕಾಂಗ್ರೆಸ್‌ನಲ್ಲಿ ಮುಂಚೂಣಿಗೆ ಬಂದರು.

ಈ ಪ್ರದೇಶದಲ್ಲಿ, ಬಿಜೆಪಿಗೆ ಅದೇ ವಾಲ್ಮೀಕಿ ಸಮುದಾಯದ ಬಿ. ಶ್ರೀರಾಮುಲು ಅವರೇ ಪ್ರಮುಖ ನಾಯಕರಾಗಿದ್ದಾರೆ. ಆದ್ದರಿಂದ ನಾಗೇಂದ್ರ ವಿರುದ್ಧದ ಪ್ರತಿಭಟನೆ ಮತ್ತು ಪಾದಯಾತ್ರೆಗಳಲ್ಲಿ ಶ್ರೀರಾಮುಲು ಅವರನ್ನೇ ಬಿಜೆಪಿ ಮುಂಚೂಣಿಯಲ್ಲಿ ಇರಿಸಿದೆ. ರಾಯಚೂರಿನಿಂದ ಬಳ್ಳಾರಿವರೆಗೆ ಪಾದಯಾತ್ರೆ ನಡೆಸುವ ಮೂಲಕ ಉತ್ತರ ಕರ್ನಾಟಕದ ಎಸ್‌ಟಿ ಮತದಾರರಿಗೆ ''ವಾಲ್ಮೀಕಿ ಸಮುದಾಯದ ಅಭಿವೃದ್ಧಿ ನಿಧಿಯನ್ನು ಕಾಂಗ್ರೆಸ್ ರಕ್ಷಿಸಲಿಲ್ಲ'' ಎಂಬ ಸಂದೇಶವನ್ನು ರವಾನಿಸಲು ಬಿಜೆಪಿ ತಂತ್ರ ಹೆಣೆದಿದೆ. ನಾಗೇಂದ್ರ ಅವರ ರಾಜಕೀಯ ವರ್ಚಸ್ಸಿಗೆ ಧಕ್ಕೆಯಾದರೆ ವಾಲ್ಮೀಕಿ ಮತಬ್ಯಾಂಕ್‌ನಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾಗಬಹುದು ಎಂಬ ಲೆಕ್ಕಾಚಾರವೂ ಇದರಲ್ಲಿದೆ.

ಒಂದು ವೇಳೆ, ಬಿಜೆಪಿಯ ಈ ಸತತ ಒತ್ತಡದ ನಡುವೆ ನಾಗೇಂದ್ರ ಅವರ ರಾಜೀನಾಮೆಯ ಸನ್ನಿವೇಶ ಎದುರಾದರೆ, ಅದರ ರಾಜಕೀಯ ಲಾಭವನ್ನು ಬಿಜೆಪಿಗೆ ಬಿಟ್ಟುಕೊಡದಿರಲು ಕಾಂಗ್ರೆಸ್ ತನ್ನದೇ ತಂತ್ರ ರೂಪಿಸಿದೆ. ಆದ್ದರಿಂದಲೇ, ಸಚಿವ ಸ್ಥಾನಕ್ಕೆ ಬಳ್ಳಾರಿ ಜಿಲ್ಲೆಯ ಸಂಡೂರು ಶಾಸಕಿ ಅನ್ನಪೂರ್ಣ ತುಕಾರಾಂ ಅವರ ಹೆಸರು ಮುನ್ನೆಲೆಗೆ ಬಂದಿದೆ.

ಅನ್ನಪೂರ್ಣ ಅವರು ಬಳ್ಳಾರಿ ಸಂಸದ ಇ. ತುಕಾರಾಂ ಅವರ ಪತ್ನಿ. 2024ರ ಲೋಕಸಭಾ ಚುನಾವಣೆಯಲ್ಲಿ ತುಕಾರಾಂ ಅವರು ಸಂಡೂರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದರು. ಅವರು ಸಂಸದರಾದ ಬಳಿಕ, ತೆರವಾದ ಶಾಸಕ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ಅನ್ನಪೂರ್ಣ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಇನ್ನೊಂದು ಸಂಗತಿ ಎಂದರೆ, ಇ ತುಕಾರಾಂ ಅವರೂ 2008ರಿಂದ ನಿರಂತರವಾಗಿ ಸಂಡೂರು ಶಾಸಕರಾಗಿದ್ದರು. ಮಾತ್ರವಲ್ಲ, 2024ರ ಲೋಕಸಭಾ ಚುನಾವಣೆಯಲ್ಲಿ ಹಾಲಿ ಶಾಸಕರಾಗಿ ಸ್ಪರ್ಧಿಸುವ ಧೈರ್ಯ ಮಾಡಿದ್ದ ಕಾಂಗ್ರೆಸ್ ನ ಏಕೈಕ ನಾಯಕ ಕೂಡ. ಆದ್ದರಿಂದ, ಅವರ ವಿಚಾರದಲ್ಲಿ ಕಾಂಗ್ರೆಸ್ ಒಲವು ಹೊಂದಿದೆ. ಜೊತೆಗೆ, ಇತ್ತೀಚೆಗೆ ಸ್ವತಃ ಅನ್ನಪೂರ್ಣ ಅವರೇ, ತುಕಾರಾಂ ಅವರು ಲೋಕಸಭೆಗೆ ಸ್ಪರ್ಧಿಸುವಾಗಲೇ ತಮ್ಮ ಕುಟುಂಬಕ್ಕೆ ಸಚಿವ ಸ್ಥಾನ ನೀಡುವುದಾಗಿ ಕಾಂಗ್ರೆಸ್ ಹೈಕಮಾಂಡ್ ಭರವಸೆ ನೀಡಿತ್ತು ಎಂದು ಬಹಿರಂಗವಾಗಿ ಹೇಳಿದ್ದಾರೆ.

ಇಂತಹ ಸನ್ನಿವೇಶದಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿ ಎಂದರೆ; ಪ್ರಸ್ತುತ ಸಚಿವ ಸಂಪುಟದಲ್ಲಿ ಕೇವಲ ಒಂದೇ ಒಂದು ಸೀಟು ಖಾಲಿ ಇದ್ದು, ನಿಯಮ ಮತ್ತು ಪಕ್ಷದ ಸಮೀಕರಣದ ಪ್ರಕಾರ ಆ ಸ್ಥಾನವನ್ನು ಮಹಿಳೆಯೊಬ್ಬರಿಗೆ ನೀಡಲೇಬೇಕು. ಒಂದು ವೇಳೆ, ಈಗಿರುವ ಪರಿಸ್ಥಿತಿಯಲ್ಲಿಯೇ ಸಚಿವ ಸಂಪುಟ ಭರ್ತಿಯಾದರೆ, ಒಬಿಸಿ/ಕುರುಬ ಸಮುದಾಯದ ಪ್ರಾತಿನಿಧ್ಯದ ಅಡಿಯಲ್ಲಿ ಗಾಯತ್ರಿ ಶಾಂತೇಗೌಡ ಅವರಿಗೆ ಆ ಅವಕಾಶ ಒಲಿಯಬೇಕಾಗುತ್ತದೆ. ಆದರೆ, ಬ್ಯಾಡಗಿ ಶಾಸಕ ಶಿವಣ್ಣನವರ್‌ಗೆ ಮಂತ್ರಿ ಹುದ್ದೆ ನೀಡಬೇಕೆಂದು ಬಯಸಿರುವ ಸಿದ್ದರಾಮಯ್ಯನವರ ಅಸಮಾಧಾನ ಮುಂದುವರೆಯುತ್ತದೆ.

ಆದ್ದರಿಂದ, ಕಾಂಗ್ರೆಸ್ ಮುಂದಿರುವ ಪರಿಹಾರ; ಬಿ. ನಾಗೇಂದ್ರ ಅವರಿಂದ ರಾಜೀನಾಮೆ ಕೊಡಿಸಿ, ಅವರ ಜಾಗಕ್ಕೆ ಅನ್ನಪೂರ್ಣ ತುಕಾರಾಂ ಅವರನ್ನು ಸಂಪುಟಕ್ಕೆ ತರುವುದು. ಹೀಗೆ ಮಾಡುವುದರಿಂದ ಎಸ್‌ಟಿ (ವಾಲ್ಮೀಕಿ) ಕೋಟಾ ಮತ್ತು ಮಹಿಳಾ ಕೋಟಾ ಎರಡೂ ಒಟ್ಟಿಗೆ ಭರ್ತಿಯಾಗುತ್ತದೆ. ಇದರಿಂದಾಗಿ ಸಂಪುಟದಲ್ಲಿ ಮೊದಲೇ ಖಾಲಿ ಇದ್ದ ಮತ್ತೊಂದು ಸೀಟು ಮುಕ್ತವಾಗಿ ಉಳಿಯುತ್ತದೆ. ಅದನ್ನು ಒಬಿಸಿ ಸಮುದಾಯಕ್ಕೆ ನೀಡಬಹುದು.

ಇದಿಷ್ಟೇ ಅಲ್ಲದೆ, ಅನ್ನಪೂರ್ಣ ತುಕಾರಾಂ ಅವರನ್ನು ಸಂಪುಟಕ್ಕೆ ಸೇರ್ಪಡೆಗೊಳಿಸುವುದು ಕಾಂಗ್ರೆಸ್‌ಗೆ ಹಲವು ರೀತಿಯಲ್ಲಿ ರಾಜಕೀಯ ಅನುಕೂಲವನ್ನು ನೀಡಲಿದೆ: ನಾಗೇಂದ್ರ ಮತ್ತು ಅನ್ನಪೂರ್ಣ ಇಬ್ಬರೂ ಎಸ್‌ಟಿ ವಾಲ್ಮೀಕಿ ನಾಯಕ ಸಮುದಾಯಕ್ಕೆ ಸೇರಿದವರಾಗಿದ್ದು, ನಾಗೇಂದ್ರರನ್ನು ತೆಗೆದರೂ ಆ ಸಮುದಾಯದ ಪ್ರಾತಿನಿಧ್ಯ ಕೈತಪ್ಪಿಲ್ಲ ಎಂಬ ಸಂದೇಶ ರವಾನೆಯಾಗುತ್ತದೆ. ಮಾತ್ರವಲ್ಲದೆ, ಪ್ರಸ್ತುತ ಸಂಪುಟದಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆಯಿದೆ ಎಂಬ ಟೀಕೆಯಿದ್ದು, ಅನ್ನಪೂರ್ಣ ಅವರ ಆಯ್ಕೆಯಿಂದ ಮಹಿಳಾ ಮತ್ತು ಎಸ್‌ಟಿ ಎರಡೂ ಪ್ರಾತಿನಿಧ್ಯವೂ ಒಂದೇ ಬಾರಿಗೆ ಪೂರ್ಣವಾಗಲಿದೆ. ಜೊತೆಗೆ, ನಾಗೇಂದ್ರರ ಸ್ಥಾನವನ್ನು ಬಳ್ಳಾರಿಯವರಿಗೇ ನೀಡುವುದರಿಂದ ಬಳ್ಳಾರಿಯ ಕಾಂಗ್ರೆಸ್ಸಿಗರು ಮತ್ತು ವಾಲ್ಮೀಕಿ ಸಮುದಾಯದ ಅಸಮಾಧಾನವನ್ನು ಶಮನಗೊಳ್ಳುತ್ತದೆ.

ನಾಗೇಂದ್ರ ನಿರ್ಗಮನ ಮತ್ತು ಅನ್ನಪೂರ್ಣ ಅವರ ಆಗಮನದ ಜೊತೆಗೆ ಸಂಪುಟದಲ್ಲಿ ಖಾಲಿ ಉಳಿದಿರುವ ಸ್ಥಾನಕ್ಕೆ ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ್ ನೇಮಕಗೊಳ್ಳುವ ಹಾದಿಯೂ ಸುಗಮವಾಗಲಿದೆ. ಕಳೆದ ಸಂಪುಟ ವಿಸ್ತರಣೆಯ ಸಂದರ್ಭದಲ್ಲೇ ಶಿವಣ್ಣನವರ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಲವಾಗಿ ಶಿಫಾರಸು ಮಾಡಿದ್ದರು. ''ಸಿದ್ದರಾಮಯ್ಯ ಅವರು ನನ್ನ ಗಾಡ್‌ಫಾದರ್, ನನಗೆ ಸಚಿವ ಸ್ಥಾನ ನೀಡಲು ಕೊನೆಯವರೆಗೂ ಒತ್ತಾಯಿಸಿದ್ದರು'' ಎಂದು ಶಿವಣ್ಣನವರ್ ಕೂಡ ಹೇಳಿಕೊಂಡಿದ್ದರು. ಅಂತಿಮ ಕ್ಷಣದಲ್ಲಿ ಅವಕಾಶ ಕೈತಪ್ಪಿದ್ದರಿಂದ ಅವರು ಬಹಿರಂಗ ಅಸಮಾಧಾನ ವ್ಯಕ್ತಪಡಿಸಿ, ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷಸ್ಥಾನವನ್ನು ನಿರಾಕರಿಸಿದ್ದರು. ಸಿದ್ದರಾಮಯ್ಯನವರ ಬೆಂಬಲದೊಂದಿಗೆ ಶಿವಣ್ಣನವರ್ ಮಂತ್ರಿ ಸ್ಥಾನಕ್ಕಾಗಿ ಕಾಯುತ್ತಿದ್ದಾರೆ. ಶಿವಣ್ಣನವರ್ ಅವರಿಗೆ ಮಂತ್ರಿಗಿರಿ ನೀಡಿದರೆ ಸಿದ್ದರಾಮಯ್ಯ ಅವರಿಗೂ ಸಮಾಧಾನವಾಗುತ್ತದೆ. ಜೊತೆಗೆ ಒಬಿಸಿ ಕೋಟಾದಡಿ ಮತ್ತೊಂದು ನೇಮಕವೂ ಆದಂತಾಗುತ್ತದೆ. ಅಂತೆಯೇ, ಕುರುಬ ಸಮುದಾಯ ಮತ್ತು ಉತ್ತರ ಕರ್ನಾಟಕಕ್ಕೂ ಸೂಕ್ತ ಪ್ರಾತಿನಿಧ್ಯ ಸಿಗುತ್ತದೆ.

ಇದೆಲ್ಲದರ ನಡುವೆ ಮತ್ತೊಂದು ಗಂಭೀರ ಸವಾಲು ಕೂಡ ಕಾಂಗ್ರೆಸ್ ಮುಂದಿದೆ. ಅದು ಬೆಂಗಳೂರಿನ ಪ್ರಭಾವಿ ನಾಯಕ ಲೇಔಟ್ ಕೃಷ್ಣಪ್ಪ (ಎಂ ಕೃಷ್ಣಪ್ಪ) ಅವರನ್ನು ಸಮಾಧಾನಪಡಿಸುವುದು. ಲೇಔಟ್ ಕೃಷ್ಣಪ್ಪ ಅವರನ್ನು ಸಚಿವರನ್ನಾಗಿ ಮಾಡಲು ಸಂಪುಟದಲ್ಲಿ ಜಾಗವಿಲ್ಲದ ಕಾರಣ, ಶಾಸಕ ಎಚ್.ಸಿ ಬಾಲಕೃಷ್ಣ ಅವರಿಂದ ರಾಜೀನಾಮೆ ಕೊಡಿಸುವ ಮತ್ತೊಂದು ಚರ್ಚೆ ಕಾಂಗ್ರೆಸ್ ಅಂಗಳದಲ್ಲಿ ನಡೆದಿದೆ.

ಬಾಲಕೃಷ್ಣ ಅವರ ತಂದೆ ಚೆನ್ನಪ್ಪ ಅವರು ಕೂಡ ಈ ಹಿಂದೆ ಕೇವಲ 10 ರಿಂದ 15 ದಿನಗಳ ಕಾಲ ಸಚಿವರಾಗಿ ರಾಜೀನಾಮೆ ನೀಡಿದ್ದ ಇತಿಹಾಸವಿದೆ. ಅದೇ ಮಾದರಿಯಲ್ಲಿ ಈಗ ಬಾಲಕೃಷ್ಣ ಅವರು ಕೂಡ ಕೇವಲ ಒಂದು ತಿಂಗಳ ಕಾಲ ಸಚಿವರಾಗಿ, ನಂತರ ರಾಜೀನಾಮೆ ನೀಡಿ ಆ ಜಾಗವನ್ನು ಲೇಔಟ್ ಕೃಷ್ಣಪ್ಪ ಅವರಿಗೆ ಬಿಟ್ಟುಕೊಡುವ ಸಾಧ್ಯತೆ ಇದೆ. ಆದಾಗ್ಯೂ, ಬಾಲಕೃಷ್ಣ ಅವರಿಂದ ರಾಜೀನಾಮೆ ಕೊಡಿಸುವ ರಾಜ್ಯ ಕಾಂಗ್ರೆಸ್ ತಂತ್ರಕ್ಕೆ ಕಾಂಗ್ರೆಸ್ ಹೈಕಮಾಂಡ್ ಇನ್ನೂ ಒಪ್ಪಿಗೆ ನೀಡಿಲ್ಲ. ಈ ಎಲ್ಲ ಆಂತರಿಕ ಲೆಕ್ಕಾಚಾರಗಳು, ಬಣಗಳ ಸಮತೋಲನ ಹಾಗೂ ಹೈಕಮಾಂಡ್ ಅನ್ನು ಒಪ್ಪಿಸಿ ಅಂತಿಮ ನಿರ್ಧಾರಕ್ಕೆ ಬರಲು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ದೆಹಲಿಗೆ ತೆರಳಿದ್ದಾರೆ.

ಇದು ಯುವಜನ ಚಳವಳಿಗಳ ಪರ್ವಕಾಲ; ಬಿಜೆಪಿಗೆ ಸಂಕಷ್ಟ ಕಾಲ

ನೀಟ್ ಅಕ್ರಮದ ವಿರುದ್ಧ ಭುಗಿಲೆದ್ದ ವಿದ್ಯಾರ್ಥಿ ಚಳವಳಿ, ಕೇಂದ್ರ ಶಿಕ್ಷಣ ಸಚಿವರಾಗಿದ್ದ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಪಡೆಯುವಲ್ಲಿ ಯಶಸ್ವಿಯಾಯಿತು. ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಮತ್ತು ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳ ಮುಂದಾಳತ್ವದಲ್ಲಿ ಕೂಡಿದ ಜೆನ್ ಝೀ ಯುವ ಸಮುದಾಯ ಸರ್ಕಾರವನ್ನು ಮಣಿಸಿತು. ಯಾರೊಬ್ಬರ ಹಿಡಿತಕ್ಕೂ ಸಿಗದೆ ಮಾಸ್ ಮೂವ್‌ಮೆಂಟ್ ಆಗಿ ರೂಪುಗೊಂಡ ಈ ಚಳವಳಿಯಿಂದಾಗಿ ಕೇಂದ್ರ ಸರ್ಕಾರ ಅಕ್ಷರಶಃ ನಡುಗಿತು.

ವಿದ್ಯಾರ್ಥಿಗಳ ವಿಶ್ವಾಸ ಪಡೆಯದಿದ್ದರೆ ರಾಜಕೀಯ ಭವಿಷ್ಯವಿಲ್ಲ ಎಂದು ಆಡಳಿತರೂಢ ಬಿಜೆಪಿಗೆ ಮನವರಿಕೆಯಾಯಿತು. ಪ್ರಧಾನಿ ನರೇಂದ್ರ ಮೋದಿಯವರೇ ನೇರವಾಗಿ ಅಖಾಡಕ್ಕೆ ಇಳಿಯಬೇಕಾಗಿ ಬಂದಿತು. ಧರ್ಮೇಂದ್ರ ಪ್ರಧಾನ್ ರಾಜೀನಾಮೆಗಾಗಿ ಕೇವಲ ಜಂತರ್ ಮಂತರ್‌ನಲ್ಲಷ್ಟೇ ಪ್ರತಿರೋಧ ದಾಖಲಾಗಲಿಲ್ಲ. ದೇಶದ ಮೂಲೆಮೂಲೆಯಲ್ಲೂ ಪ್ರತಿಭಟನೆಗಳು ಜರುಗಿದವು. ವಿನೂತನ ಘೋಷಣೆಗಳು ಹೊಮ್ಮಿದವು. ಸರ್ಕಾರವನ್ನು ಮೀಮ್ ಗಳ ಮೂಲಕವೇ ಅಣಕಿಸಲಾಯಿತು. ಜೆನ್ ಝೀ- ತಲೆಮಾರು ಚರ್ಚೆಯ ಕೇಂದ್ರಬಿಂದುವಾದರು. ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜ್ ಮಾಡಿ, ಟಿಯರ್ ಗ್ಯಾಸ್, ಪೆಲೆಟ್ ಗನ್ ಬಳಸಿದ ಕೇಂದ್ರ ಸರ್ಕಾರ ಅಕ್ಷರಶಃ ಹೊಸತಲೆಮಾರನ್ನು ಎದುರು ಹಾಕಿಕೊಂಡಿತು. ಪೊಲೀಸ್ ಕ್ರೌರ್ಯ ನಡೆದ ಸಂದರ್ಭದಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬೀದಿಗಿಳಿದರು. ಪ್ರಧಾನಿ ನಿವಾಸದ ಎದುರು ಪ್ರತಿಭಟನೆ ನಡೆಸಲು ಮುಂದಾದಾಗ ಅವರನ್ನು ವಶಕ್ಕೆ ಪಡೆಯಲಾಯಿತು.

ಜೆನ್ ಝೀಗಳ ವಿಶ್ವಾಸ ಪಡೆಯಬೇಕೆಂಬ ಸಾಹಸಕ್ಕೆ ಇಳಿದ ಪ್ರಧಾನಿ ಮೋದಿಯವರು ಮಧ್ಯರಾತ್ರಿ ರೀಲ್ಸ್ - ಪ್ರಹಸನಗಳನ್ನೂ ನಡೆಸಿಬಿಟ್ಟರು. ಅದ್ಯಾವುದೂ ಪ್ರಯೋಜನಕ್ಕೆ ಬರಲಿಲ್ಲ. ಅಂತಿಮವಾಗಿ ಪ್ರಧಾನ್ ರಾಜೀನಾಮೆ ಕೊಟ್ಟರು. ನೀಟ್ ಅಕ್ರಮ ವಿರೋಧಿ ಆಂದೋಲನದಿಂದ ಹಿಡಿದು- ಪ್ರಧಾನ್ ನಿರ್ಗಮನದವರೆಗಿನ ವಿದ್ಯಮಾನ ಒಂದು ಬಗೆಯದ್ದಾದರೆ, ಆನಂತರ ಬಿರುಸಾಗಿರುವ ಯುವಜನ ಚಳವಳಿಗಳು ಮತ್ತು ಅದಕ್ಕೆ ರಾಜಕೀಯ ಪಕ್ಷಗಳು ತೋರುತ್ತಿರುವ ಪ್ರತಿಕ್ರಿಯೆಗಳು ಭಾರತದ ಭವಿಷ್ಯವನ್ನು ಹೇಳುತ್ತಿವೆ.

ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಒತ್ತಾಯಿಸಿ ನಡೆದ ಪ್ರತಿಭಟನೆ

ನೀಟ್ ಸುತ್ತಲಿನ ವಿದ್ಯಮಾನ ಪಡೆದುಕೊಂಡಿದ್ದು ಪ್ರಧಾನ್ ರಾಜೀನಾಮೆಯನಷ್ಟೇ ಅಲ್ಲ; ಯುವಜನ ಚಳವಳಿಗಳು ಭಾರತದ ಮುಂದಿನ ಚುನಾವಣೆಗಳನ್ನು ನಿರ್ಧರಿಸಲಿವೆ ಎಂಬ ಸತ್ಯ ಮುನ್ನಲೆಗೆ ಬಂದಂತೆ ಕಾಣುತ್ತಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಎನ್‌ಡಿಎ ಮತ್ತು ವಿರೋಧ ಪಕ್ಷಗಳ ಒಕ್ಕೂಟ ಇಂಡಿಯಾ- ಈ ಎರಡು ಕೂಡ ವಿದ್ಯಾರ್ಥಿಗಳನ್ನೇ ಕೇಂದ್ರೀಕರಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಅದರಲ್ಲೂ ಜೆನ್ ಝೀ ತಲೆಮಾರನ್ನೇ ಉದ್ದೇಶಿಸಿ ತಮ್ಮ ತಂತ್ರಗಾರಿಕೆಗಳನ್ನು ಹೆಣೆಯುತ್ತಿದ್ದಾರೆ. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರು ಛಾತ್ರೋಂಕಿ ಗೂಂಜ್ (ವಾಯ್ಸ್ ಆಫ್ ಸ್ಟುಡೆಂಟ್ಸ್) ಅಭಿಯಾನವನ್ನು ಕೈಗೊಂಡಿದ್ದಾರೆ. ಚುನಾವಣೆ ಹೊಸ್ತಿಲಲ್ಲಿರುವ ಉತ್ತರಪ್ರದೇಶ ರಾಜ್ಯದಲ್ಲಿ ಅವರು ನಡೆಸಿದ ಕಾರ್ಯಕ್ರಮ ರಾಜಕೀಯವಾಗಿ ದೊಡ್ಡ ಸದ್ದು ಮಾಡಿದೆ. ಸಮಾರಂಭವನ್ನು ತಡೆಯಲು ಯೂಪಿ ಸರ್ಕಾರ ಇನ್ನಿಲ್ಲದ ಸರ್ಕಸ್ ನಡೆಸಿತು. ಆದರೆ ಅದ್ಯಾವುದೂ ಫಲ ನೀಡಲಿಲ್ಲ. ದೊಡ್ಡ ಸಂಖ್ಯೆಯಲ್ಲಿ ಯುವ ಸಮುದಾಯ ಕಾರ್ಯಕ್ರಮಕ್ಕೆ ಹರಿದು ಬಂದಿದ್ದು, ಬಿಜೆಪಿ ಮತ್ತು ಸಂಘಪರಿವಾರವನ್ನು ನಿದ್ದೆಗೆಡಿಸಿದೆ.

ಹೆಣ್ಣುಮಕ್ಕಳಿಗೆ ಶಾಲೆಗಳನ್ನು ತೆರೆದ ಅಕ್ಷರ ಮಾತೆ ಸಾವಿತ್ರಿ ಬಾಯಿ ಫುಲೆ ಅವರ ನೆನಪುಗಳನ್ನು ಗಾಢವಾಗಿ ಹೊಂದಿರುವ ಮಹಾರಾಷ್ಟ್ರದ ಪುಣೆಯಲ್ಲಿ ರಾಹುಲ್ ನಡೆಸಿದ ಛಾತ್ರೋಂಕಿ ಗೂಂಜ್ ವಿನೂತನವಾಗಿತ್ತು. ಹೆಣ್ಣನ್ನು ಸಂಪ್ರದಾಯದ ಸೆರಗಿನಲ್ಲಿ ಬಂಧಿಸುವ ಮನುಸ್ಮೃತಿ ಮತ್ತು ಅದರ ಸಮರ್ಥಕರ ವಿರುದ್ಧ ರಾಹುಲ್ ಗುಡುಗಿದ್ದಾರೆ. ಈ ಕಾರ್ಯಕ್ರಮವು ಜೆನ್ ಝೀ ಯುವತಿಯರನ್ನೇ ಕೇಂದ್ರೀಕರಿಸಿತ್ತು. ಸಾವಿರಾರು ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು. ರಾಹುಲ್ ಅವರು ವೇದಿಕೆ ಮೂಲಕ ಸ್ಟ್ರಾಟಜಿಕ್ ಆಗಿ ಸಂಘಪರಿವಾರದ ಸ್ತ್ರೀವಿರೋಧಿ ಧೋರಣೆಗಳನ್ನು ಅನಾವರಣ ಮಾಡಿದರು. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಪ್ರಧಾನಿ ನರೇಂದ್ರ ಮೋದಿ ಮತ್ತು ಯೂಪಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ನೀಡಿರುವ ಸ್ತ್ರೀವಿರೋಧಿ ಹೇಳಿಕೆಗಳನ್ನು ತೋರಿಸಿ, ಅದರ ವಿರುದ್ಧ ಮಾತನಾಡಿದರು. ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ, ಕಿರುಕುಳಗಳ ಕುರಿತು ಪ್ರಶ್ನಿಸಿದರು. ''ನೀವು ಯಾರ ಅಧೀನದಲ್ಲೂ ಇರಬೇಕಿಲ್ಲ. ನಿಮಗೊಂದು ಸ್ವತಂತ್ರ ಅಸ್ತಿತ್ವವಿದೆ'' ಎಂದು ಗಟ್ಟಿಯಾಗಿ ಹೇಳಿದರು.

ಸಾಮಾನ್ಯವಾಗಿ ರಾಹುಲ್ ಗಾಂಧಿಯವರು ಯಾವುದೇ ಅಭಿಯಾನವನ್ನು ಕೈಗೆತ್ತಿಕೊಂಡರೂ ಅದನ್ನು ಒಂದು ದೀರ್ಘಕಾಲವಧಿಯವರೆಗೆ ಮುನ್ನಡೆಸುವುದನ್ನು ಕಾಣುತ್ತೇವೆ. ಅವರ ಭಾರತ ಜೋಡೋ ಯಾತ್ರೆಯ ಎರಡು ಕಂತುಗಳಿರಬಹುದು, ಈಗ ನಡೆಸುತ್ತಿರುವ ಛಾತ್ರೋಂಕಿ ಗೂಂಜ್ ಇರಬಹುದು- ರಾಹುಲ್ ನಡೆಸುವ ಚಳವಳಿ ಪ್ಯಾಟ್ರನ್ ಸ್ಪಷ್ಟವಾಗಿ ಕಾಣುತ್ತದೆ. ಜೆನ್ ಝೀಗಳ ಕೂಗನ್ನು ತಣ್ಣಗಾಗಿಸಲು ಬಿಡಬಾರದೆಂದು ಅವರಿಗೆ ಮನವರಿಕೆಯಾಗಿದೆ. ''ವಿದ್ಯಾರ್ಥಿಗಳ ಮೇಲೆ ಪೆಲೆಟ್ ಗನ್ ಪ್ರಯೋಗಿಸಲು ಯಾರು ಆದೇಶಿಸಿದರು? ದೆಹಲಿ ಪೊಲೀಸರು ಕೇಂದ್ರ ಗೃಹ ಸಚಿವರ ಅಧೀನಕ್ಕೆ ಬರುತ್ತಾರೆ. ಗೃಹಸಚಿವರು ಸದನಕ್ಕೆ ಬಂದು ಉತ್ತರ ನೀಡಬೇಕು. ಪೆಲೆಟ್ ಗನ್ ಬಳಸಲು ಆದೇಶ ನೀಡಿದ್ದರೆ, ಅಮಿತ್ ಶಾ ಅಪರಾಧಿಯಾಗುತ್ತಾರೆ, ಹೀಗಾಗಿ ಅವರು ರಾಜೀನಾಮೆ ನೀಡಬೇಕು. ಪೆಲೆಟ್ ಗನ್ ಬಳಕೆ ಅಮಿತ್ ಶಾ ಅವರ ಗಮನಕ್ಕೆ ಬಾರದೆ ಆಗಿದ್ದರೆ- ಗೃಹಸಚಿವರಾಗಿರಲು ಅಸಮರ್ಥರಾಗಿರುತ್ತಾರೆ- ಆಗಲೂ ಅವರು ರಾಜೀನಾಮೆ ನೀಡಬೇಕು'' ಎಂದು ಪಟ್ಟು ಹಿಡಿದರು. ಕೊನೆಯ ದಿನದವರೆಗೂ ಅಮಿತ್ ಶಾ ಸದನಕ್ಕೆ ಕಾಲಿಡದೆ ತಲೆಮರೆಸಿಕೊಂಡರು. ಶಾ ಅವರು ಏನೇ ಹೇಳಿಕೆ ಕೊಟ್ಟರೂ ತಿರುಗುಬಾಣವಾಗುತ್ತಿತ್ತು.

ಪೆಲೆಟ್ ಗನ್ ಬಳಕೆ ವಿಚಾರವನ್ನು ರಾಹುಲ್ ಇಲ್ಲಿಗೆ ಬಿಡಲಿಲ್ಲ. ಗಾಯಗೊಂಡ ಯುವಜನರನ್ನು ಕರೆದುಕೊಂಡು ಬಂದು ಪ್ರೆಸ್ ಮೀಟ್ ಮಾಡಿದರು. 19 ವರ್ಷದ ಸಂತ್ರಸ್ತ ಸಾಹಿಲ್ ಲೋಚಬ್ ಅವರಿಂದ ದೂರು ಕೊಡಿಸಿದರು. ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಲು ಹಿಂದೇಟು ಹಾಕಿದಾಗ, ಸಂಸತ್ ಬೀದಿ ಠಾಣೆಯ ಎದುರು ಸಾಹಿಲ್ ಜೊತೆಯಲ್ಲಿ ಧರಣಿ ಕುಳಿತರು. ಅಂತಿಮವಾಗಿ ಎಫ್‌ಐಆರ್ ದಾಖಲಿಸಲೇಬೇಕಾಯಿತು. ಜೆನ್ ಝೀಗಳೊಂದಿಗೆ ರಾಹುಲ್ ಗಾಂಧಿ ನಿರಂತರ ಗುರುತಿಸಿಕೊಳ್ಳುವಲ್ಲಿ ಮೇಲುಗೈ ಸಾಧಿಸಿರುವುದಂತೂ ದಿಟ.

ವಿದ್ಯಾರ್ಥಿ ಮುಖಂಡ ದೇವೇಂದ್ರ ನಾಥ್ ಮಹತೋ ಅವರು ಉಪವಾಸ ಸತ್ಯಾಗ್ರಹ ನಡೆಸುತ್ತಿರುವುದು

ಇದೇ ಹೊತ್ತಿನಲ್ಲಿ ಝಾರ್ಖಂಡ್‌ನಲ್ಲಿ ಕಾಂಗ್ರೆಸ್ ಬೆಂಬಲದೊಂದಿಗೆ ಅಧಿಕಾರದಲ್ಲಿರುವ ಝಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ನೇತೃತ್ವದ ಸರ್ಕಾರ, ವಿದ್ಯಾರ್ಥಿಗಳ ಮೇಲೆ ಲಾಠೀ ಚಾರ್ಜ್ ಮಾಡಿತ್ತು. ಜಾರ್ಖಂಡ್ ಲೋಕಸೇವಾ ಆಯೋಗ () ಮತ್ತು ಜಾರ್ಖಂಡ್ ಸ್ಟಾಫ್ ಸೆಲೆಕ್ಷನ್ ಕಮಿಷನ್ () ನಡೆಸುವ ವಿವಿಧ ಸ್ಪರ್ಧಾತ್ಮಕ ಹಾಗೂ ನೇಮಕಾತಿ ಪರೀಕ್ಷೆಗಳಲ್ಲಿ ದೊಡ್ಡ ಮಟ್ಟದ ಅಕ್ರಮಗಳು ನಡೆದಿವೆ, ಪ್ರಶ್ನೆಪತ್ರಿಕೆ ಸೋರಿಕೆ ಆಗಿವೆ ಎಂಬುದು ವಿದ್ಯಾರ್ಥಿಗಳ ಆಕ್ರೋಶಕ್ಕೆ ಕಾರಣವಾಗಿತ್ತು. ಪರೀಕ್ಷಾ ಅಕ್ರಮಗಳನ್ನು ಸಿಬಿಐ ತನಿಖೆಗೆ ವಹಿಸಬೇಕು, ಪರೀಕ್ಷೆಗಳನ್ನು ರದ್ದುಗೊಳಿಸಬೇಕು ಎಂದು ಚಳವಳಿ ಆಗ್ರಹಿಸಿತು. ವಿದ್ಯಾರ್ಥಿ ಮುಖಂಡ ದೇವೇಂದ್ರ ನಾಥ್ ಮಹತೋ ಅವರು ಹದಿನಾರು ದಿನ ಉಪವಾಸ ಸತ್ಯಾಗ್ರಹ ನಡೆಸಿದರು. ವಿವಾದಕ್ಕೀಡಾಗಿದ್ದ ಸುಮಾರು 22 ನೇಮಕಾತಿ ಪರೀಕ್ಷೆಗಳನ್ನು ರದ್ದುಗೊಳಿಸಿದ ಸರ್ಕಾರ ಇತರ ಪರೀಕ್ಷೆಗಳ ತನಿಖೆಗೆ ಆದೇಶಿಸಿತು. ರಾಜ್ಯದ ಪರೀಕ್ಷಾ ವ್ಯವಸ್ಥೆ ಹಾಗೂ ನೇಮಕಾತಿ ಪ್ರಕ್ರಿಯೆಗಳಲ್ಲಿ ಆಮೂಲಾಗ್ರ ಸುಧಾರಣೆಗಳನ್ನು ತರಲು ಹಿರಿಯ ಐಎಎಸ್ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿತು. ಆದರೆ ವಿಧಾನಸಭೆ ಚಲೋ ಹಮ್ಮಿಕೊಂಡಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಮೇಲೆ ಸರ್ಕಾರ ಲಾಠೀ ಪ್ರಯೋಗಿಸಿದ್ದು ಟೀಕೆಗಳಿಗೆ ಗುರಿಯಾಯಿತು. ''ಯಾವುದೇ ಸರ್ಕಾರ ಇರಲಿ, ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಯೋಗಿಸುವುದನ್ನು ಖಂಡಿಸುತ್ತೇನೆ. ನಾನು ಇದನ್ನು ಬೆಂಬಲಿಸುವುದಿಲ್ಲ'' ಎಂದು ರಾಹುಲ್ ನಿಲುವು ತೆಗೆದುಕೊಂಡರು. ಇದರ ನಡುವೆ ಕಾಂಗ್ರೆಸ್‌ನದ್ದು, ಇಬ್ಬಂದಿ ನೀತಿ ಎಂದು ಬಿಜೆಪಿ ಸಂಸದರು ಪ್ಲೆಕಾರ್ಡ್ ಹಿಡಿದು ಸಂಸತ್ತಿನ ಎದುರು ಪ್ರತಿಭಟನೆ ಮಾಡಿದರು.

ಪ್ರತಿಪಕ್ಷಗಳ ನಾಯಕ ರಾಹುಲ್ ಅವರ ಹೊಸ ಯಾತ್ರೆಯನ್ನು ನೋಡಿ ಬಿಜೆಪಿ ಸುಮ್ಮನೆ ಕೂತಿಲ್ಲ. ನೀಟ್ ಅಕ್ರಮ ವಿರೋಧಿ ಆಂದೋಲನದಲ್ಲಿ ದೇಶದ್ಯಾಂತ ಬಿಜೆಪಿ ವಿರುದ್ಧ ತಿರುಗಿರುವ ಯುವಜನರನ್ನು ತನ್ನತ್ತ ಸೆಳೆದುಕೊಳ್ಳಲು ಬಿಜೆಪಿ ಕೂಡ ಇನ್ನಿಲ್ಲದಂತೆ ಕಸರತ್ತು ಮಾಡುತ್ತಿದೆ. ಸರ್ಕಾರ ಪ್ರತಿಯೊಬ್ಬ ಸಚಿವರನ್ನು ವಿಶ್ವವಿದ್ಯಾನಿಲಯಗಳಿಗೆ ಕಳುಹಿಸಲು ತೀರ್ಮಾನಿಸಿದೆ. ಒನ್ ಡೇ ಒನ್ ಯೂನಿವರ್ಸಿಟಿ ಹೆಸರಿನ ಕಾರ್ಯಕ್ರಮದ ಅಡಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಅವರ ಸಮಸ್ಯೆಗಳನ್ನು ಆಲಿಸಲು ಸರ್ಕಾರ ತೀರ್ಮಾನಿಸಿದೆ. ವಿದ್ಯಾರ್ಥಿಗಳ ಸಂಕಷ್ಟ ಆಲಿಸದೆ ಇದ್ದರೆ ಉಳಿಗಾಲವಿಲ್ಲ ಎಂಬುದು ಮೋದಿಯವರಿಗೆ ಮನವರಿಕೆಯಾಗಿರುವುದು ಸ್ಪಷ್ಟ.

ನೈಜ ಸಮಸ್ಯೆಗಳನ್ನು ಪ್ರಶ್ನಿಸಿ ನಡೆಯುತ್ತಿರುವ ಚಳವಳಿಗಳಿಗೆ ಬಹುಸಂಖ್ಯಾತ ದಲಿತ, ಹಿಂದುಳಿದ ವಿದ್ಯಾರ್ಥಿಗಳು ಬಲ ತುಂಬುತ್ತಿರುವ ಹೊತ್ತಿನಲ್ಲಿಯೇ, ಹೇಗಾದರೂ ಚಳವಳಿಗಳ ದಿಕ್ಕುತಪ್ಪಿಸುವ ಉದ್ದೇಶದಿಂದ ಸಂಘಪರಿವಾರ ವಿಚಾರ ಪ್ರಣೀತ ಮೀಸಲಾತಿ ವಿರೋಧಿ ಹೋರಾಟವನ್ನು ಉದ್ದೀಪಿಸಲು ಯತ್ನಿಸಲಾಗಿದೆ. ರಿಸರ್ವೇಷನ್ ಹಟಾವೋ ಆಂದೋಲನ ಎಂಬ ಇನ್‌ಸ್ಟಾಗ್ರಾಂ ಖಾತೆಯು, ಬ್ರಾಹ್ಮಣೀಯ ಮೇಲರಿಮೆಯನ್ನು ಪೋಷಿಸುವವರಿಂದ ಸೃಷ್ಟಿಸಲ್ಪಟ್ಟಿತು. ದಲಿತ ಮತ್ತು ಹಿಂದುಳಿದ ಸಮುದಾಯಗಳ ಬಗ್ಗೆ ಅಸಹನೀಯವಾಗಿ ಮಾತನಾಡುವ ಅಜಿತ್ ಬಾರ್ತಿ ಎಂಬ ಯೂಟ್ಯೂಬರ್, ಬ್ರಾಹ್ಮಿನ್ಸ್ ಜೀನ್ಸ್ ಎಂದು ಅಹಂಕಾರದಿಂದ ಜಾತಿ ಮೇಲರಿಮೆಯನ್ನು ತೋರಿಸಿಕೊಳ್ಳುವ ಅನುರಾಧ ತಿವಾರಿಯಂಥವರು ಈ ಖಾತೆಯ ಹಿಂದೆ ಇದ್ದರು. ರಿಸರ್ವೇಷನ್ ಹೋಗಲಾಡಿಸಿ ಎಂದು ಉಯಿಲೆಬ್ಬಿಸಿ, ಬಿಜೆಪಿ ವಿರೋಧಿ ಗಾಳಿಯನ್ನು ಬೇರೆಡೆ ಸೆಳೆಯುವ ಉದ್ದೇಶವನ್ನು ಇಟ್ಟುಕೊಂಡಂತೆ ಕಾಣುತ್ತಿದ್ದ ಈ ಹೋರಾಟವು ಪರೋಕ್ಷವಾಗಿ ಎಸ್‌ಸಿ, ಎಸ್‌ಟಿ, ಒಬಿಸಿ ಯುವಜನರನ್ನು ಗುರಿಯಾಗಿಸಿಕೊಂಡಿತ್ತು. ಯುವಜನರನ್ನು ಜಾತಿ ಆಧಾರದಲ್ಲಿ ಒಡೆಯುವ ವಿಕೃತಿಯನ್ನು ಬಿಜೆಪಿ ಮತ್ತು ಸಂಘಪರಿವಾರ ಹಿಂಬಾಲಿನಿಂದ ಮಾಡುತ್ತಿವೆ ಎಂಬ ಟೀಕೆಗಳು ವ್ಯಕ್ತವಾದವು. ಜಂತರ್ ಮಂತರ್‌ಗೂ ಇಳಿದ ಮೀಸಲಾತಿ ವಿರೋಧಿಗಳಿಗೆ ದೊಡ್ಡ ಬೆಂಬಲವೇನೂ ಸಿಗಲಿಲ್ಲ. ಎಲ್ಲ ಜಾತಿಗಳಿಗೂ ಮೀಸಲಾತಿ ಇರುವ ಈ ಹೊತ್ತಿನಲ್ಲಿ ಬಲಪಂಥೀಯ ತೀವ್ರವಾದಿಗಳು ನಡೆಸುತ್ತಿದ್ದ ಹೋರಾಟವು ಅರ್ಥಕಳೆದುಕೊಂಡಿತ್ತು. ಇಲ್ಲಿಯೂ ಯುವಜನರೇ ಮುಖ್ಯ ಸಂಗತಿಯಾಗಿರುವುದನ್ನು ಗಮನಿಸಬೇಕಾಗುತ್ತದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR